ಪಂಚಮ

ವಿಶೇಷ ಸಂಚಿಕೆ
ಬೆಲೆ 50 ಪೈಸೆ

ಸಂಪುಟ : 1 20-12-1976 ಸಂಚಿಕೆ: 7-8



ಬಿ ಆರ್ ಅಂಬೇಡ್ಕರ್
[14-4-1891 6-12-1956]

ಈಗ ತಾನೆ ಕಣ್ಣು ಬಿಟ್ಟಿರುವ ನಾವು

'ಅಂಬೇಡ್ಕರ್ ಸ್ಮರಣ ಸಂಚಿಕೆ' ಯಾಗಿ ಬಂದಿರುವ ಇದು ಪಂಚಮದ ವಾರ್ಷಿಕ ವಿಶೇಷಾಂಕ. ದಲಿತರ ಮೇಲೆ ದಿನಾಲೂ ನಡೆಯುತ್ತಿರುವ ಕೊಲೆ ಸುಲಿಗೆಗಳನ್ನು ಮನಗಂಡು ಹುಟ್ಟಿಕೊಂಡ ಪಂಚಮ ಇದು ವರೆಗೆ, ಹಳ್ಳಿ ಮತ್ತು ಪಟ್ಟಣಗಳಲ್ಲಿ ಮೇಲ್ಜಾತಿ ಅರ್ಥಾತ್ ಮೇಲ್ ವರ್ಗಗಳು ದಲಿತರ ಮೇಲೆ ನಡೆಸುತ್ತಿರುವ ಕೊಲೆ ಸುಲಿಗೆ ದೌರ್ಜನ್ಯ ಗಳನ್ನು ಬಯಲು ಮಾಡುತ್ತಾ ಬರುತ್ತಿದೆ. ಹಾಗೆ ನೋಡಿದರೆ ಪಂಚಮ ದ ಕಣ್ಣಿಗೆ ಬೀಳದೆ ದಲಿತರ ಮೇಲೆ ನಡೆಯುವ ಕೊಲೆ ಸುಲಿಗೆಗಳು ಲೆಕ್ಕಕ್ಕೆ ಸಿಗದಷ್ಟು ಈ ಮಣ್ಣಲ್ಲಿ ಇವೆ. ಎಂಥೆಂಥ ಕಾನೂನುಗಳನ್ನೂ ಲೆಕ್ಕಿಸದೆ ನಡೆಯುತ್ತಿರುವ ಈ ತರದ ಅಮಾನವೀಯ ದೌರ್ಜನ್ಯಗಳು ದಲಿತರನ್ನು ಇಡೀ ವ್ಯವಸ್ಥೆಯನ್ನೇ ಪ್ರಶ್ನಿಸುವಂತೆ. ಚಿಂತಿಸುವಂತೆ ಮಾಡಿದೆ. ಈ ದಿಕ್ಕಲ್ಲಿ ದಲಿತರನ್ನು ಪ್ರಜ್ಞಾವಂತರನ್ನಾಗಿ ಮಾಡುವುದು, ತಮ್ಮ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯ ವಿರುದ್ಧ ಶಕ್ತಿಯುತವಾಗಿ ದಲಿತರನ್ನು ಸಂಘಟಿಸುವುದು, ಮಾನವೀಯತೆಗಾಗಿ ಹೋರಾಡುವಂತೆ ಇವರನ್ನು ಪ್ರೇರೇಪಿಸುವುದು ಇತ್ಯಾದಿ, ಪಂಚಮದ ಗಟ್ಟಿ ಹೆಜ್ಜೆಗಳಾಗಿವೆ. ಇತ್ತೀಚೆಗೆ ದಲಿತರ ನೋವಿನ ಬಗ್ಗೆ ಸಾಕಷ್ಟು ಕಾಳಜಿ ಹೊಂದುತ್ತಿರುವ ದಲಿತ ಲೇಖಕರನ್ನು ಸಂಘಟಿಸುವುದು, ಈ ಮೂಲಕ ದಲಿತ ಯುವ ಶಕ್ತಿಯ ಕೂಗನ್ನು ದಲಿತ ಸಾಹಿತ್ಯ ಪ್ರತಿನಿಧಿಸುವಂತೆ ಮಾಡುವುದು; ಇಲ್ಲಿಂದ ದಲಿತರಿಗೆ ಪ್ರಜ್ಞೆ ಮೂಡಿಸುವ ಕೆಲಸ ಮಾಡುವುದು; ಈ ದಿಕ್ಕಲ್ಲಿ ಪಂಚಮ ಈಗ ಇದೆ. ದಲಿತರಂತೆ ನೋವುಳ್ಳವರೆಲ್ಲರು, ದಲಿತರ ನೋವಿನ ಬಗ್ಗೆ ಕಣ್ಣುಳ್ಳವರು, ಹೃದಯವುಳ್ಳವರು, ಕಳಕಳಿವುಳ್ಳವರು ಕಡೆಗಣಿಸಲ್ಪಟ್ಟ ಈ ಪಂಚಮ ಜಗತ್ತಿನ ಕೂಗಿನ ಜೊತೆಗೆ ಧ್ವನಿ ಸೇರಿಸಿ.

-ಸಂಪಾದಕ

ಈ ಸಂಚಿಕೆಯಲ್ಲಿ

ದಲಿತರ ಕೂಗು ಪಂಚಮ

ಸಂಪಾದಕ: **ರಾಮದೇವ ರಾಕೆ**
ಜೊತೆಗೆ : **ಶಿವಾಜಿ ಗಣೇಶನ್**
ಶಿವಮಲ್ಲ ದೇವನೂರು
ಪ್ರಕಾಶಕ : ಹೆಚ್. ಗೋವಿಂದಯ್ಯ

ಅಸ್ಪೃಶ್ಯತೆ ನನ್ನ ಅನುಭವ

ಪುಸ್ತಕದ ಬದನೆಕಾಯಿ

ನಾನು ಪ್ರೌಢಶಾಲೆ ಓದುತ್ತಿದ್ದಾಗ ನನ್ನ ತಂದೆ "ಅಸ್ಪೃಶ್ಯತೆ ಅಪರಾಧಗಳು" ಎಂಬ ಪುಸ್ತಕ ತಂದರು. ನನಗೆ ಅದನ್ನು ಓದಿದ ಮೇಲೆ ನಾವು ಎಲ್ಲರಿಗೂ ಸಮಾನ, ನಮ್ಮ ಉದ್ಧಾರಕ್ಕಾಗಿ ಸರ್ಕಾರ ಕೈಕಟ್ಟಿ ನಿಂತಿದೆ ಎಂದು ಉತ್ಸಾಹ ಮೂಡಿತು. ಹೀಗೇ ಒಮ್ಮೆ ನಮ್ಮ ಪಕ್ಕದ ಊರಾದ ಬೆಳ್ಳೂರಿಗೆ ಕ್ಷೌರ ಮಾಡಿಸಿಕೊಂಡು ಬರಲು ಹೋದೆ. ಆ ಊರಲ್ಲಿ ನಮ್ಮವರಿಗೆ ಕ್ಷೌರ ಮಾಡಿಕೊಡಲ್ಲ ಎನ್ನುವುದು ಗೊತ್ತಿತ್ತು. ಅವರು ಅಕಸ್ಮಾತ್ "ನಿನಗೆ ಕ್ಷೌರ ಮಾಡಿಕೊಡಲ್ಲ" ಅಂತ ಹೇಳಿದರೆ ಈ ಪುಸ್ತಕವನ್ನು ತೋರಿಸಿ, "ನೀನು ಕ್ಷೌರ ಮಾಡಿಕೊಡದಿದ್ದರೆ ಜೈಲಿಗೆ ಹಾಕುತ್ತಾರೆ" ಎಂದು ಹೇಳುವ ಎಂದು ಆ ಪುಸ್ತಕವನ್ನು ಜೇಬಿನಲ್ಲಿ ಇಟ್ಟುಕೊಂಡಿದ್ದೆ. ಅಂತೂ ಧೈರ್ಯ ಮಾಡಿ ಒಂದು ಕ್ಷೌರದ ಅಂಗಡಿಗೆ ನುಗ್ಗಿದಾಗ ಅಂಗಡಿಯವ ಕುರ್ಚಿಗೆ ಕುಳ್ಳಿರಿಸಿ ತಲೆಗೆ ಕತ್ತರಿ ಹಾಕಿದ. ಸಮಾಧಾನ ಆಯಿತು. ನನ್ನ ಅರ್ಧಕ್ಷೌರ ಆಗಿರಬೇಕು. ಅಷ್ಟೊತ್ತಿಗೆ ಅಲ್ಲಿಗೆ ನಮ್ಮೂರಿನ ಒಬ್ಬ ಮೇಲ್ಜಾತಿಯವ ಬಂದ. ಬಂದವನೇ ದುರುದುರು ನೋಡಿ "ಎಲಾ ಹೊಲೆಯಾ ನಿನಗೂ ಹಜಾಮನ ಷೋಕಿ ಬೇಕಾ? ಎಂದು ಅನಾಮತ್ ಖುರ್ಚಿಯಿಂದ ಎತ್ತಿ ಬಾಗಿಲೆಡೆ ಹೊಗೆದ. ನೋವಾದರೂ ಬಂಡ ಧೈರ್ಯಮಾಡಿ ಜೇಬಿನಿಂದ ಪುಸ್ತಕ ಹೊರಕ್ಕೆ ತೆಗೆದು "ನಿಮ್ಮನ್ನು ಜೈಲಿಗೆ ಹಾಕಿಸ್ತೀನಿ" ಎಂದೆ. ಅವರು "ಕಾನೂನು ಯಾರ್ ಮಾಡಿದ್ರೊ, ಆ ಗೌರ್ನಮೆಂಟಿನೋರತ್ತರನೇ ಕ್ಷೌರ ಮಾಡಿಸ್ಕೊ ಹೋಗು" ಎಂದು ಹೊರಕ್ಕೆ ತಳ್ಳಿದರು. ಅರ್ಧ ಕ್ಷೌರ ಆಗಿತ್ತು. ತಲೆಗೆ ಟವಲು ಹಾಕಿಕೊಂಡು ನಾನು ಅಲ್ಲಿಂದ ಸೀದಾ ಪೋಲೀಸ್ ಸ್ಟೇಷನ್ನಿಗೆ ಹೋದೆ. ಬಾಗಿಲಲ್ಲೆ ಒಬ್ಬ ಪೋಲೀಸು "ಏನು ಏನು ಅಂದ. ನಾನು ದುಃಖದಿಂದ ಎಲ್ಲಾ ಹೇಳಿ "ಅಸ್ಪೃಶ್ಯತೆ ಅಪರಾಧಗಳು" ಪುಸ್ತಕ ತೋರಿಸಿದೆ. ಅವ ಗಹಗಹಿಸಿ ನಕ್ಕುಬಿಟ್ಟ. ಇಲ್ಲಿಂದ ನಡಿ ನಡಿ ಅಂತ ಆಚೆಗೆ ಅಟ್ಟಿಬಿಟ್ಟ. ಅರ್ಥವಾಗದೆ ಮೂಕನಾದೆ.

● ಗಂಗಾಧರಯ್ಯ, ಮೈಸೂರು

ಚಪ್ಪಲಿ ಜಾತಿ

ನಮ್ಮೂರಿಗೆ ನಮ್ಮ ಪಕ್ಕದ ಊರಿನ ಒಕ್ಕಲಿಗ ಹೆಂಗಸೊಬ್ಬಳು ದಿನಾಲೂ ಮಜ್ಜಿಗೆ ಮಾರಲು, ಬರುತ್ತಾಳೆ. ಎಂಥವರೂ ಅಸಹ್ಯ ಪಡುವಂಥ ಕೊಳಕಾಗಿರುವ ಅವಳಿಗೆ ಅಪ್ಪಿ ತಪ್ಪಿ ಮಜ್ಜಿಗೆ ಹಾಕುವಾಗ ನಮ್ಮೂರವರ ಪಾತ್ರೆಗಳು ಸೋಕಿಬಿಟ್ಟರೆ ಮಾರಾಮಾರಿ ಮಾಡುತ್ತಾಳೆ. ಇದ ನಾ ಒಮ್ಮೆ ಕೇಳಿದಾಗ "ಜಾತಿ ಅಂದರೆ ಯಾತಕ್ಕಾಯ್ತು"ಅಂದುಬಿಟ್ಟಳು. ನಾನು ದಿನಾಲು ಬೆಳಿಗ್ಗೆ ರಸ್ತೆಯ ಪಕ್ಕದಲ್ಲಿರುವ ನಮ್ಮ ಗದ್ದೆ ಬಳಸಲು ಹೋಗುತ್ತೇನೆ. ಗದ್ದೆ ಬಳಸುವಾಗ ಸಾಮಾನ್ಯವಾಗಿ ಚಪ್ಪಲಿಯನ್ನು ರಸ್ತೆ ಪಕ್ಕದಲ್ಲಿ ಬಿಟ್ಟಿರುತ್ತೇನೆ. ಹೀಗೇ ಒಮ್ಮೆ ಗದ್ದೆ ಬಳಸುತ್ತಿದ್ದಾಗ, ಆ ಮಜ್ಜಿಗೆ ಮಾರುವ ಹೆಂಗಸು ಆ ಕಡೆಯಿಂದ ಹಾದು ಹೋದಳು. ನಾನು ರಸ್ತೆಗೆ ಬಂದು ನೋಡಿದಾಗ ಅಲ್ಲಿ ಚಪ್ಪಲಿ ಇರಲಿಲ್ಲ. ಅವಳು ಕಾಲಿಗೆ ನನ್ನ ಚಪ್ಪಲಿ ಸಿಕ್ಕಿಸಿಕೊಂಡು ಬಿರಬಿರನೆ ಹೋಗುತ್ತಿದ್ದಳು. ನಾನು ಓಡಿಹೋಗಿ "ಮ್ಮೋ ಇವು ನನ್ನ ಕಾಲಿನ ಚಪ್ಪಲಿ" ಅಂದೆ. ಅವಳು ಹಾವು ತುಳಿದಂತಾಗಿ "ಥೂ ಇವು ನಿನ್ನ ಕಾಚಲಿನಪ್ಪಲಿನಾ" ಅಂತ ಅವುಗಳನ್ನು ಬಿಸಾಕಿ ಓಡಿಹೋಗಿ ಹರಿಯುತ್ತಿದ್ದ ನೀರಿನಲ್ಲಿ ತನ್ನ ಕಾಲನ್ನು ಹಾಕಿ ತೊಳೆದುಕೊಂಡಳು.

ಎಸ್. ಕಾಳಯ್ಯ ಜಗಜೀವನಗ್ರಾಮ

ಸರ್ಕಾರಕ್ಕೆ ಬುದ್ಧಿಯಿಲ್ಲ

ನಾನು ಪ್ರೌಢಶಾಲೆಯಲ್ಲಿ ಓದುತ್ತಿರುವಾಗ ಎನ್. ಸಿ. ಸಿ. ಗೆ ಸೇರ
ಸೆಲೆಕ್ಷನ್ ದಿನ ಹೋಗಿದ್ದೆ. ಎಲ್ಲರನ್ನೂ ಸಾಲಾಗಿ ನಿಲ್ಲಿಸಿದರು. ನಾನೂ ನಿಂ
ಆಫೀಸರು ಒಂದು ಕಡೆಯಿಂದ ನೋಡುತ್ತ ನನ್ನ ಬಳಿ ಬಂದು ನನ್ನ ಬ
ನೋಡಿ "ಎಲ್ಲಿಂದ ಬರ್ತೀಯ" ಅಂದ್ರು. ನಾನು "ಹರಿಜನ ಹಾಸ್ಟ
ನಿಂದ" ಅಂದೆ. "ಥೂ ನಿನ್ನ ಮುಖ ನೋಡಲು ಅಸಹ. ಸ್ನಾ
ಮಾಡೊಲ್ಲ, ಬಟ್ಟೆ ಒಗೆಯೊಲ್ಲ, ನಿಮ್ಮನ್ನ ಎನ್. ಸಿ. ಸಿ. ಗೆ ಸೇರಿಸಿಕೊ
. ಈ [illegible] ದ್ಧಿಯಿಲ್ಲ ಎಂದರು.

● ವಿ. ಮೂಡ್ಲಯ

ದಂಡ ಕೊಡಿಸಿದ ಜಾತಿ

ನಾನು ಹೈಸ್ಕೂಲಲ್ಲಿ ಇದ್ದಾಗ ನಡೆದ ಘಟನೆ ಇದು. ನಾನು
ಗಲೂ ಬಟ್ಟೆಗಳನ್ನು ಇಸ್ತ್ರಿ ಮಾಡಿಸಿಕೊಂಡು ಬರಲು ಪೇಟೆ ಬೀದಿಯ
ಇಸ್ತ್ರಿ ಅಂಗಡಿಯೊಂದಕ್ಕೆ ಹೋಗುತ್ತಿದ್ದೆ. ಒಂದು ದಿನ ಆ ಅಂ
ಮಾಲೀಕ (ದೋಬಿ) "ಯಾವ ಕೇರಿಯಿಂದ ಬರ್ತೀಯೇನಪ್ಪ"
ಕೇಳಿದ. ತಕ್ಷಣ ನಾನು 'ಹೊಲೆಗೇರಿಯಿಂದ' ಎಂದೆ. "ಈವೊತ್ತೇ ಕೆ
ಯಾವತ್ತೂ ಇಲ್ಲಿಗೆ ಬರಬ್ಯಾಡ" ಎಂದ. ನನಗೆ ಒಂದು ರೀತಿಯ ಭ
ಆತಂಕ ಉಂಟಾಗಿ ಇಲ್ಲಿಂದ ಬೇಗ ಹೊರಟರೆ ಸಾಕು ಎಂದು ಹೃದ
ಒಂದೇ ಸಮನೆ ಬಡಿದುಕೊಳ್ಳುತ್ತಿತ್ತು. ಬಟ್ಟೆ ಇಸ್ತ್ರಿ ಮಾಡಿಕೊಟ್ಟ. ಆಗ
ನ್ಯಾಯ ಬೆಲೆ 10 ಪೈಸೆ, ನನಗೆ ಆ ದಿನ 20 ಪೈಸೆ ತೆಗೆದುಕೊಂಡ.

● ಗಣೇಶನ್ ಮಳವ

ನಗುತ್ತೀರಿ ನಗಿ ನಗಿ


ನನ್ನಿಪ್ಪತ್ತರರೆಯುವ ಕಕ್ಕಟ್ಟ ಕರಿ
ಚರ್ಮವನಿಷ್ಟಿಷ್ಟೆ ನಿಮಗಿಷ್ಟ ಬಂದಂಗೆ
ಕೂಯ್ದು ಸಿಕ್ಕ ಸಿಕ್ಕಂಗೆ ಸುಲಿದು
ಎಲ್ಲಂದರಲ್ಲಿ
ನಿಮ್ಮೆಸರ ನಮ್ಮಪ್ಪ ಅಪ್ಪರ ಮೈಯ
ಮಹಡಿಗಳ ಮೇಲೆ ಹದ್ದುಗಳು
ಕೂರುವ ಸರಹದ್ದಿನಲ್ಲಿ ನನ್ನ
ಸಿಗಿದು ನೇತಾಕಿ ನಗುತ್ತಿದ್ದೀರಿ
ನಗಿ.
ನಗಿ ಇನ್ನೂ ಜೋರಾಗಿ ಗಹಗಹಿಸಿ
ನಗಿ.
ನನ್ನೆಲ್ಲರನು ನುಂಗಿ ನೊಣೆದ ನಿಮ್ಮ
ಈ ನಗುವಿನಟ್ಟಹಾಸದೊಳಗೇ ನಾನು
ಮೊಳೆತಿದ್ದೇನೆ ಚಿಗುರಿದ್ದೇನೆ ಮೈಯೆಲ್ಲ
ಮುಳ್ಳಾಗಿ ಹುಡಲಿದ್ದೇನೆ.
ಅಲ್ಲಿತನಕ
ಈ ಕಕ್ಕಟ್ಟೆ ಕರಿ ಚರ್ಮ ಸುದು
ಹೋಗುವತನಕ
ನಾ ಕೆಂಪಗೆ ನಿಮ್ಮೆದೆಯ ಮೇಲೆಲ್ಲ
ತಿರುಗಾಡುವತನಕ
ನಗುತ್ತೀರಿ
ನಗಿ ನಗಿ ನಗಿ.........

ಎಚ್. ಗೋವಿಂದಯ್ಯ

ದಲಿತ ಸ್ಥಿತಿಗೆ ಹಿಡಿದ ಕನ್ನಡಿ - ಶ್ರೀ ಕುಂಡತೇಲಯ್ಯನ ಕಥೆ

[ವರದಿ: ನಮ್ಮ ಪ್ರತಿನಿಧಿಯಿಂದ]

ಇದುವರೆಗೆ ದಲಿತರ ಪರವಾಗಿ ಮಾಡಿರುವ ಕಾನೂನು ಕಟ್ಟಲೆಗಳು ಮೂಸಿಯೂ ನೋಡಲು ಹೆದರುವ ಜಾಗಗಳು ಇಂಡಿಯಾದಲ್ಲಿ ಲೆಕ್ಕಕ್ಕೆ ಸಿಗದಷ್ಟು ಇವೆ. ಮಂಡ್ಯ ಜಿಲ್ಲೆಯ ಬಹಳಷ್ಟು ಊರುಗಳು ಈ ಗುಂಪಿಗೆ ಸೇರುತ್ತವೆ. ಕಾವೇರಿ ನೀರಿಗೆ ದಟ್ಟವಾಗಿ ಬೆಳೆದ ಇಲ್ಲಿನ ಕಬ್ಬು, ಅದರ ಮೇಲೆ ನಿರಾತಂಕವಾಗಿ ಬೆಳೆದಿರುವ ಸವರ್ಣೀಯ ಬಂಡವಾಳಶಾಹಿಗಳ ಹುತ್ತವೇ ಇಲ್ಲಿ ಇದೆ. ಈ ದಟ್ಟ ಕತ್ತಲೆಯನ್ನು ಕೆದಕಿದರೆ ದಲಿತನ ಮೇಲೆ ನಡೆದಿರುವ, ನಡೆಯುತ್ತಿರುವ ಅದೆಂತೆಂಥ ರಕ್ತ ಕುದಿಸುವ ಭೀಕರ ಘಟನೆಗಳು ಇಲ್ಲಿ ಸಿಕ್ಕುತ್ತವೋ. ಅಂತೂ ಅದ ಕೆದಕಿಲ್ಲ. ಹಾಗೇ ಹೊಲೆ ಮಾದಿಗರು ಸವರ್ಣೀಯರ ಈ ಕತ್ತಲ ಕೋಟೆಯಿಂದ ಹೊರಬರಲಾಗಿಲ್ಲ.



ಇನ್ನೂರು ರೂಪಾಯಿ ಸಾಲ ತೆಗೆದುಕೊಂಡ ತಪ್ಪಿಗೆ ನೆಲಮನೆಯಲ್ಲಿ ೧೦ ವರ್ಷ ಜೀತದ ಜೈಲುವಾಸ ಅನುಭವಿಸಿ ಈಗ ಸ್ವಂತ ಊರಿನಲ್ಲಿ ಪೂರ್ತಿ ಅನಾಥನಾಗಿರುವ ನಿರಾಶೆಭರಿತ ಶ್ರೀ ಕುಂಡತೇಲಯ್ಯ.

ಕೂಲಿ ಜೀತ ಕೊಲೆ

ಮೈಸೂರು ಜಿಲ್ಲೆಯ ಹೊಟ್ಟೆಗಿಲ್ಲದ ದಲಿತರಿಗೆ ಬೇರೆಲ್ಲೂ ಕೂಲಿ ಸಿಕ್ಕದ ಗೊಟ್ಟಿನ ಕಾಲಕ್ಕೆ ಮಂಡ್ಯಾ ಜಿಲ್ಲೆಯ ಬಹಳಷ್ಟು ಊರುಗಳು ಹೊಟ್ಟೆ ತುಂಬಿಸುವ ಸ್ವರ್ಗಗಳಾಗಿ ಕಾಣುತ್ತವೆ. ಹೀಗಾಗಿ ಮೈಸೂರು ಸುತ್ತಮುತ್ತಲ ಮತ್ತು ಟಿ. ನರಸೀಪುರ ತಾಲ್ಲೂಕಿನ ಬಹಳಷ್ಟು ದಲಿತರು ಮಂಡ್ಯಾ ಜಿಲ್ಲೆಗೆ ಆಗಾಗ್ಗೆ ವಲಸೆ ಹೋಗುತ್ತಾರೆ. ಸಾಹುಕಾರನ 'ಕಟಾಕ್ಷ' ಬಿದ್ದರೆ ಜೀತಗಾರರಾಗುತ್ತಾರೆ. ತಕ್ಕೊಂಡ ಸಾಲ ತೀರದೆ ಹೋದರೆ ಅಲ್ಲೇ ಗುಡಿಸಲಾಕುತ್ತಾರೆ – ಸಾಲ ತೀರಿಸಲು. ಹೀಗೆ. ಈ ಕ್ರಮವನ್ನು ಮೀರಿದ ಹೊಲೆ ಮಾದಿಗರು ದಟ್ಟವಾಗಿ ಬೆಳೆದ ಕಬ್ಬಿನ ಗದ್ದೆಯ ಕತ್ತಲೆಯಲ್ಲಿ ಮಾಯವಾಗಿಹೋಗುವ ಸಾಧ್ಯತೆಗಳಿರುತ್ತವೆ. ಅದಕ್ಕಾಗೇ ಇಲ್ಲಿನ ಜನಗಳಿಗೆ ಮಂಡ್ಯಾ ಜಿಲ್ಲೆಯ ಕಬ್ಬಿನ ಗದ್ದೆಯೆಂದರೆ ಒಂದು ರೀತಿಯ ದುಃಸ್ವಪ್ನ. ಇಂಥದೇ ಒಂದು ಭೀಕರ ಅನುಭವಕ್ಕೆ ಕುಂಡತೇಲಯ್ಯ ಮತ್ತು ಅವನ ಹೆಂಡತಿ ಮಕ್ಕಳು ಒಳಗಾಗಿದ್ದಾರೆ.

ಒಂಭತ್ತು ವರ್ಷದ "ಜೈಲುವಾಸ"

ಹತ್ತು ವರ್ಷಕ್ಕೆ ಹಿಂದೆ. ಸ್ವಂತ ಊರಲ್ಲಿ ಕೂಲಿ ಹುಟ್ಟಲಿಲ್ಲ. ಕೂಲಿಗಾಗಿ ಹುಡುಕುತ್ತಾ ಮಂಡ್ಯಾದ ಕಡೆ ಹೊರಟ ಕುಂಡತೇಲಯ್ಯ, ಮಂಡ್ಯಾ ಜಿಲ್ಲೆಯ ನೆಲಮನೆ ಸೇರಿದ. ಊರಿನ ಪ್ರತಿಷ್ಠಿತ ವ್ಯಕ್ತಿ ನಾಗರಾಜಗೌಡನ 'ಕಟಾಕ್ಷ' ಇವನ ಸಂಸಾರದ ಮೇಲೆ ಬಿತ್ತು. ಕೂಲಿಗೆಂದು ಹೋದವ ತನ್ನ 12 ವರ್ಷದ ಮೊದಲನೆಯ ಮಗ ಒಡ್ಡಲ್ಲನನ್ನು ನಾಗರಾಜಗೌಡರ ಮನೆಯಲ್ಲಿ 200 ರೂಪಾಯಿಗೆ ಜೀತಕ್ಕಿರಿಸಿದ. ನಂತರ ಎರಡನೆಯ ಮಗ ಚಿಕ್ಕನುಮನೂ ಅದೇ ಮನೆಗೆ ಜೀತಕ್ಕೆ ಹೋಗಬೇಕಾಯಿತು. ಇದೇ ಸರಿ ನೆಲಮನೆಯಲ್ಲಿ ಜೈಲುವಾಸ ಶುರುವಾಯಿತು. ತಿರುಗಾಡಲು ರೆಡಿಯಾಗಿದ್ದ ಚಿಕ್ಕಮಗ ಮಹಾದೇವ ಬರಿ ಹಿಟ್ಟಿಗಾಗಿ ನರಸಿಂಹೇಗೌಡನ ಮನೆಯಲ್ಲಿ ದನ ಕುರಿ ಎಮ್ಮೆ ಕಾಯಲು ಹೋಯಿತು. ಹೆಂಡತಿ ಒಡ್ಡಲ್ಲಮ್ಮ ಚಿಕ್ಕವೆಂಕಟಪ್ಪನ ಮನೆಯಲ್ಲಿ ವರ್ಷಕ್ಕೆ 10 ಕೊಳಗ ಭತ್ತಕ್ಕಾಗಿ ದಿನಾಲು ಕಸ ಗುಡಿಸಲು, ಬೆರಣಿ ತಟ್ಟಲು ಸೇರಿಕೊಂಡಳು. ಪುಡಿ ಹೆಣ್ಣು ಮಕ್ಕಳು ಗೌಡನ ಮನೆಯ ಮುಂದೆ ಬೋಸಿ ಹಿಡಿದು ನಿಲ್ಲಲು ಶುರುವಾದವು. ಹೀಗೆ ಬಂದರ ಹಿಂದೆ ಒಂದು ಬಂದು ನೆಲಮನೆಯಲ್ಲಿ ಕುಂಡತೇಲಯ್ಯನ ಸಂಕೋಲೆಗಳು ಬಿಗಿಯಾಗುತ್ತಾ ಬಂದುವು. ತಿಂಗಳ ಮೇಲೆ ತಿಂಗಳು, ವರ್ಷಗಳ ಮೇಲೆ ವರ್ಷ ಬಂದು ಹೋದವು. ಆದರೆ "ಸಾಲ ತೀರಲಿಲ್ಲ ತೀರಲಿಲ್ಲ" ಅಂತ ಗೌಡನ ಮನೆಗೆ ನುಗ್ಗಿ ಮಕ್ಕಳನ್ನು ಒದ್ದು ಎಳಕೊಂಡು ಹೋಗುವುದು ಶುರುವಾಯಿತು. ಅಂತೂ ಗೌಡನ ಭಯಕ್ಕೆ ಮತ್ತು ತಮ್ಮ ಪ್ರಾಣದ ಮೇಲಿನ ಆಶೆಗಾಗಿ ಒಡ್ಡಲ್ಲ ಮತ್ತು ಚಿಕ್ಕನುಮನು ಗೌಡರು ಹೇಳಿದ ಜೀತ ಮಾಡುತ್ತಾ ಮಾಡುತ್ತಾ ಬಂದರು. ಹೊಟ್ಟೆಗಿಲ್ಲದೆ ತಲೆಯ ಮೇಲೆ ಕಬ್ಬು, ಮಣ್ಣು, ಗೊಬ್ಬರ ಹೊತ್ತೂ ಹೊತ್ತೂ ತಲೆಯೆಲ್ಲ ರಟ್ಟಾಗಿ ವಿಕಾರವಾಗಿ ಹೋದರು. ಮಕ್ಕಳ ರೂಪು ನೋಡಿ ಕುಂಡತೇಲಯ್ಯನಿಗೆ ದಿಗಿಲಾಗಿ ಹೋಯಿತು.

ಕಾನೂನು ಬಂತು ಕಾನೂನು

ಇಂಥ ಸಮಯಕ್ಕೆ ಸರ್ಕಾರದಿಂದ "ಸಾಲ ಮತ್ತು ಜೀತದಿಂದ ವಿಮುಕ್ತಿ" ಅನ್ನುವ ಕಾನೂನು ಬಂತು. ಪೇಪರು ರೇಡಿಯೋಗಳಲ್ಲೆಲ್ಲ ಸುದ್ದಿಯಾಯಿತು. ವಿಷಯ ಕುಂಡತೇಲಯ್ಯನಿಗೂ ತಿಳಿದು, ಅಂತೂ ಒಂಬತ್ತು ವರ್ಷಗಳ ಮೇಲಾದರೂ ಈ ಜೀತದ ಜೈಲಿನಿಂದ ಬಿಡಿಸಿಕೊಂಡು ತನ್ನ ಸ್ವಂತ ಊರಿಗೆ ತಲುಪುತ್ತೇನೆ ಅಂದುಕೊಂಡ. ಆದರೆ ಸಾವಿರದ ಮೇಲೆ ಒಕ್ಕಲಿಗರ ಮನೆ ಮತ್ತು 50 ಹರಿಜನರ ಮನೆ ಇರುವ ನೆಲಮನೆಯನ್ನು ಸರ್ಕಾರದ ಕಾನೂನು ಮೂಸಿಯೂ ನೋಡಲಿಲ್ಲ. ಹೆಂಗಸರೆಲ್ಲ ಗೌಡರುಗಳ ಮನೆಯಲ್ಲಿ ಕಸಸುರಿವ ಬೆರಣಿ ತಟ್ಟುವುದು, ಗಂಡಸರು ಯಾವಾಗಲೊ ಮಾಡಿದ ಸಾಲಕ್ಕೆ ಹೇಳಿದ ಜೀತ ಮಾಡುವುದು ಆಗಾಗೇ ಉಳಿಯಿತು. "ಯಾವ ಕಾನೂನು ಬುಡ್ಲ" ಅಂತ ಗೌಡರು ಮಾತಾಡಿಕೊಂಡರು.

ಮತ್ತೆ ಜೀತದ ಜೈಲು

ಕಾನೂನು ಬಂದು ಹೋಯಿತು. ಕುಂಡತೇಲಯ್ಯನ ಸಂಸಾರದ ಜೈಲುವಾಸ ನೆಲಮನೆಯಲ್ಲಿ ಹಾಗೇ ಮುಂದುವರಿಯಿತು. ಗೌಡನು ಬಂದು "ದುಡ್ಡು ವಾಪಸ್ಸು ಕೊಡ್ತಿರೊ ಇಲ್ಲ ಜೀತಕ್ಕೆ ಬತ್ತಿರೋ" ಅಂದನು. ಅಳುತ್ತಾ ಮನೆಯೊಳಕ್ಕೆ ಹೋದ ಒಡ್ಡಲ್ಲ ಮತ್ತು ಚಿಕ್ಕನುಮರನ್ನು ಮನೆ ನುಗ್ಗಿ ಜುಟ್ಟಿಡಿದು ಹೊರಕ್ಕೆ ಎತ್ತಿಕೊಂಡು ಬಂದು ಸೆಬ್ಬೆಯಿಂದ ಚೆನ್ನಾಗಿ ಬಾರಿಸಿದನು. "ನಿಮ್ಮ ಪೋಲೀಸು, ಪಿ. ಸಿ. ಎಲ್ಲಾ ಗೊತ್ತು ಕಣಲೇ" ಅಂದನು. ಒಂಬತ್ತು ವರ್ಷದ ಹಿಂದಿನ ಸಾಲ "ತೀರಲಿಲ್ಲ" ಮತ್ತೆ ಅದೇ ಜೀತ ನಿಲ್ಲಲಿಲ್ಲ.

ಮಗೂ ಸತ್ತರೂ....

ಈ ಮಧ್ಯೆ ಕುಂಡತೇಲಯ್ಯನ ಮಗುವೊಂದು ತೀರಿಹೋಯಿತು. ಅದನ್ನು ವಪ್ಪಾ ಮಾಡಲು ಯಾರೂ ಇಲ್ಲ. ಒಡ್ಡಲ್ಲ, ಚಿಕ್ಕನುಮ, ಮಹದೇವ ಹೇಗೋ ತಮ್ಮ ಒಡೆಯರ ಕಣ್ಣು ತಪ್ಪಿಸಿ ಓಡಿಬಂದು ಮಗುವಿನ ಸುತ್ತಾ ಅಳುತ್ತಾ ಕೂತರು. ಆದರೆ ಗೌಡನ ಬಂದು "ನೀವು ಇಲ್ಲಿಕೂತ್ರೆ ನಮ

(ಮುಂದಿನ ಪುಟಕ್ಕೆ)

……… …ಕುಂಡತೇಲಯ್ಯನ ಕತೆ ಮುಂದುವರೆದುದು

ಮನೆ ಕೆಲ್ಸ ಯಾರೊ ಮಾಡೋರು ಬೋಳಿಮಕ್ಳ" ಎಂದು ಚೆನ್ನಾಗಿ ಬಾರಿಸಿ ದರದರನೆ ಎಳೆದುಕೊಂಡು ಹೋದನು. "ಇನ್ನೊಂದ್ಸಾರಿ ಇಂಗೆ ಮಾಡಿದ್ರೆ ಮನೆ ಒಳಕ್ಕೆ ಕೂಡಾಕಿ ನಿಮ್ಮನ್ನೆಲ್ಲ ಸುಟ್ಟಾಕಿ ಬುಡ್ತೀವಿ ಹುಷಾರು" ಎಂದನು. 5 ವರ್ಷ ಚಿಕ್ಕವೆಂಕಟಪ್ಪನ ಮನೆಯಲ್ಲಿ ಕಸಗುಡ್ಸಿ, ಹೊತ್ತು, ಬೆರಣಿ ತಟ್ಟಿದ್ದಕ್ಕೆ ಒಡ್ಡಲ್ಲಮ್ಮನಿಗೆ ಈಗ ಒಂದು ಕಾಳು ಭತ್ತವನ್ನೂ ಕೊಡಲಿಲ್ಲ. ಗೌಡನ ಮನೆಯಲ್ಲಿ ಹಡವು ಇಟ್ಟಿದ್ದ 2 ಕಂಚಿನ ಗಳಾಸು, 8 ಬೆಳ್ಳಿ ಬಳೆ, 1 ಜೊತೆ ಚೈನು, 1 ಮೇಸ್ತ್ರಿ ಎಲ್ಲಾ ಹಾಗಾಗೇ ಆದುವು.

ರಾತ್ರೋ ರಾತ್ರಿ………

ಕುಂಡತೇಲಯ್ಯ ಮತ್ತು ಮಕ್ಕಳ ಮೇಲೆ ಗೌಡ ದಿನಾಲೂ ನಿಗಾ ಇಡುತ್ತಾ ಬಂದ. ಮಕ್ಕಳು ಮನೆಗೆ ಬರುವುದೇ ಕಷ್ಟ ಆಯಿತು. ಊರ ಸುತ್ತಲೂ ಕರ್ರಗೆ ಬೆಳೆದ ಕಬ್ಬಿನ ಗದ್ದೆ ಜೇರೆ. ಈಗ ಕುಂಡತೇಲಯ್ಯ ಪ್ರಾಣವನ್ನು ಪಣ ಕೊಡುವ ನಿರ್ಧಾರ ಮಾಡಿದ. ವಿಷಯವನ್ನು ಹೆಂಡತಿ ಮಕ್ಕಳಿಗೆಲ್ಲ ತಿಳಿಸಿದ. ಅಂತೂ ಎಲ್ಲರೂ ಒಪ್ಪಿ ರೆಡಿಯಾಗಿ ಒಂದು ದಿನ ಕತ್ತಲಾಗುವುದನ್ನೇ ಕಾಯುತ್ತಾ ಕುಂತರು. ಸರಿ 11 ಗಂಟೆಯ ಕಾಳ ರಾತ್ರಿ. ಒಬ್ಬರಿಗೊಬ್ಬರು ಕಾಣಿಸಲಿಲ್ಲ. ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು ಎಲ್ಲರೂ ಗುಡಿಸಿಲಿಂದ ಹೊರಬಿದ್ದರು. ಜೈಲಿನಿಂದ ಬಿಡಿಸಿಕೊಳ್ಳುವ ತವಕದಲ್ಲಿ ಭಯಂಕರ ಕತ್ತಲು, ಕಾಲಿಗೆ ಸಿಕ್ಕ ಕಲ್ಲು ಮುಳ್ಳು, ಕಾಡು, ನೀರು ನೆನಪಿಗೆ ಬರಲಿಲ್ಲ. ಕಾಡುದಾರಿಯಲ್ಲಿ ರಾತ್ರೆ ಇಡೀ ಮತ್ತು ಬೆಳಿಗ್ಗೆ 12 ಗಂಟೆ ತನಕ ಓಡುತ್ತಾ ಓಡುತ್ತಾ ನಡೆದು ತಮ್ಮ ಸ್ವಂತ ಊರು ಜಗಜೀವನ ಗ್ರಾಮವನ್ನು ತಲುಪಿದಾಗ 10 ವರ್ಷದ ನೆಲಮನೆಯ ಜೈಲುವಾಸ ಪೂರ್ತಿಯಾಯಿತು.

ಕೈಗೆ ಸಿಕ್ಕಿದ್ದರೆ

"ಆ ರಾತ್ರಿ ನಾವು ಅವರ ಕೈಗೆ ಸಿಕ್ಕಿದ್ದರೆ ತರಿದು ಕಬ್ಬಿನ ಗದ್ದೆಗಾಕ್ತಾ ಇದ್ರು" ಎಂದು ಕಣ್ಣೀರಿಡುತ್ತಾ ನೆಲಮನೆಯ ತಮ್ಮ ಇಡೀ ಅನುಭವವನ್ನು ತೋಡಿಕೊಳ್ಳುವ 50 ವರ್ಷ ವಯಸ್ಸಿನ ಕುಂಡತೇಲಯ್ಯ ಮತ್ತು ಅವನ ಹೆಂಡತಿ ಮಕ್ಕಳು ಈಗ ನೆಮ್ಮದಿಯ ಉಸಿರು ಬಿಡುತ್ತಿದ್ದಾರೆ. ಆದರೆ ಈಗ ತಮ್ಮ ಸ್ವಂತ ಊರು ಜಗಜೀವನಗ್ರಾಮದಲ್ಲಿ ಇವರು ಪೂರ್ತಿ ನಿರಾಶ್ರಿತರು. 9 ವರ್ಷಕ್ಕೆ ಹಿಂದೆ ಇದ್ದ ಗುಡಿಸಲು ಈಗ ಪೂರ್ತಿ ನೆಲಸಮವಾಗಿದೆ. ಇದ್ದ ಬದ್ದ ಸಾಮಾನನ್ನ ನೆಲಮನೆಯ ಗುಡಿಸಲಲ್ಲೇ ಬಿಟ್ಟು ಓಡಿಬಂದಿದ್ದಾರೆ. ಪ್ರಾಣ ಉಳಿಯಿತು ಎನ್ನುವ ನೆಮ್ಮದಿಯ ವಿಷಯ ಒಂದನ್ನು ಬಿಟ್ಟರೆ ಈಗ ಇವರು ಪೂರ್ತಿ ಅನಾಥರು.

oooooooooooooooooooooooooooooooooooooo

"ಅವರಿಗೇನು ಗೊತ್ತು"

ಕೂತರೆ ಅರ್ಧ ಅಡಿ ಒಳ ಹೊಕ್ಕುವ ಸೋಫಾದ ಮೇಲೆ
ಕುಳಿತು ಆಜ್ಞೆ ಮಾಡುವವರಿಗೇನು ಗೊತ್ತು,
ಮುಳ್ಳಿನ ಮೇಲೆ ಮಲಗಿ ನರಳುವವರಗತಿ
ಅಮೃತ ಕುಡಿದು ಕುಣಿದು ಕುಪ್ಪಳಿಸುತ್ತಿರುವ
ಹೊಟ್ಟೆ ತುಂಬಿದ ಜನಕೆ, ಹಸಿದ ಜನಗಳ
ಗೋಳೇನು ಗೊತ್ತು,
ನೋವನ್ನರಿಯದ ಸಾವನ್ನರಿಯದ ಜನಕೆ,
ದುಡಿದು ದುಸ್ಥಿತಿಗೆ ಬಂದಿರುವ
ದೇಹಗಳ ಸ್ಥಿತಿಯೇನು ಗೊತ್ತು,
ಮೋಡದಲಿ ಹಿಜಾಡುವವರೇ
ಮಣ್ಣಿನಲಿ ಮುಳುಗುತಿಹರು ನೋಡಿ ಕಣ್ಣು ತೆರೆದು
ಆಕಾಶದಲ್ಲಿ ನೆಡೆಯುವವರೇ
ಭೂಮಿಯ ಮಣ್ಣಿನಲಿ ಗುರುತು ಸಿಕ್ಕದೆ
ಬಿದ್ದಿರುವ ಹೆಣಗಳನ್ನು ನೋಡಿ
ನಿಲ್ಲಲಿ ನಿಮ್ಮ ಪಾಫ್ ಸಂಗೀತ
ಕೇಳಿಸಿಕೊಳ್ಳಿ
ನಿಲ್ಲಿಸಿ ನಿಮ್ಮ ಬಣ್ಣದ ನೀರಿನ ಬೆಡಗಿನ ಕುಣಿತವನ್ನ
ಇಳಿಯಿರಿ ಮೇಲಿಂದ ಕೆಳಗೆ,
ಇರಲಿ ನನದೊಂದು ನಿಮಗೆ ಧಿಕ್ಕಾರ.

ಜನಾರ್ಧನ ಬೆಂಗಳೂರು

SSSSSSSSSSSSSSSSSSSSSSSSSSSSSSSSSSSSSSSSSSSSSSSSSS

ಅಂಬೇಡ್ಕರ್ ಜೀವನದಲ್ಲಿನ ಕೆಲವು ಘಟನೆಗಳು

[ಡಾ|| ಬಿ. ಆರ್. ಅಂಬೇಡ್ಕರ್ ಅವರ ಹರಿತವಾದ ಪಾಂಡಿತ್ಯ, ಬಂಡಾಯ ಪ್ರವೃತ್ತಿ, ದಲಿತೋದ್ಧಾರದ ಕಳಕಳಿಯಮೇಲೆ ಬೆಳಕು ಬೀರುವಂತಹ ಘಟನೆಗಳನ್ನು ಸೊಹನಲಾಲ್ ಶಾಸ್ತ್ರಿಯವರು ಹಿಂದಿಯಲ್ಲಿ ಬರೆದಿರುವ "ಬಾಬಾ ಸಾಹೇಬ್ ಬಿ. ಆರ್. ಅಂಬೇಡ್ಕರ್‌ರೊಡನೆ 25 ವರ್ಷ" ಎಂಬ ಗ್ರಂಥದಿಂದ ಆರಿಸಿ ಇಲ್ಲಿ ಕೊಡಲಾಗಿದೆ. ಅಂಬೇಡ್ಕರ್ ಅವರ ನಿಜವಾದ ವ್ಯಕ್ತಿತ್ವ ಇವುಗಳಿಂದ ಸ್ಪಷ್ಟವಾಗುತ್ತದೆ. ಶ್ರೇಷ್ಠ ವಾಗ್ಮಿಗಳಾದ ಸೊಹಾನ್‌ಲಾಲ್ ಶಾಸ್ತ್ರಿಗಳು 1931 ರಿಂದ 1956 ರವರೆಗೆ ಅಂಬೇಡ್ಕರ್ ಅವರ ನಿಕಟವರ್ತಿಗಳಾಗಿದ್ದರು. ಅಂಬೇಡ್ಕರರು ಪ್ರತಿಯೊಂದು ಸಂಗತಿಯನ್ನೂ ಶಾಸ್ತ್ರಿಗಳ ಕಿವಿಗೆ ಹಾಕದೆ ಇರುತ್ತಿರಲಿಲ್ಲ. ಅಂಬೇಡ್ಕರರ ಅಂತ್ಯದವರೆಗೂ ಶಾಸ್ತ್ರಿಗಳು ಅಂಬೇಡ್ಕರರ ನೆರಮನೆಯಲ್ಲಿಯೇ ವಾಸಿಸುತ್ತಿದ್ದು ವಾಸ್ತವಿಕವಾದ ಅಂಶಗಳನ್ನೇ ನಿರೂಪಿಸಿದ್ದಾರೆ. ಕೆಲವನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.]

೧

ಗೋವಿಂದವಲ್ಲಭ ಪಂತರು ಆಗ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾಗಿದ್ದರು. ಅಂಬೇಡ್ಕರರು ಕೇಂದ್ರದಲ್ಲಿ ಕಾನೂನು ಮಂತ್ರಿಗಳಾಗಿದ್ದರು. ಉತ್ತರ ಪ್ರದೇಶದಲ್ಲಿ ನಡೆದ ಹರಿಜನ ಗಿರಿಜನ ಹಾಗೂ ಹಿಂದುಳಿದ ಜನಾಂಗಗಳ ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪಂತರೂ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಂಬೇಡ್ಕರರು ತೀಕ್ಷ್ಣವಾದ ಆದರೆ ಉದ್ಬೋಧಕವಾದ ಭಾಷಣ ಮಾಡಿದರು — "ಹಿಂದುಳಿದಿರುವ ನಿಮ್ಮಲ್ಲಿಂದು ಒಗ್ಗಟ್ಟು, ಸಂಘಟನೆ ಇಲ್ಲವೇ ಇಲ್ಲ. ನೀವೆಲ್ಲಾ ಒಟ್ಟಾದರೆ, ಸಂಘಟಿತರಾದರೆ ಪಂತರಿಗೆ ಸರಿಸಮನಾದ ಬ್ರಾಹ್ಮಣರೂ ನಿಮ್ಮ ಬೂಟುಗಳ ದಾರ ಬಿಚ್ಚಲು ಹೆಮ್ಮೆ ಪಡುತ್ತಾರೆ. ಆದರೆ ನಿಮ್ಮಲ್ಲಿನ ಅನೈಕ್ಯತೆ, ಅಸಂಘಟನೆಯಿಂದಾಗಿ ಅವರೆಲ್ಲಾ ನಿಮ್ಮ ಮೇಲೆ ಸವಾರಿ ಮಾಡಲು ಅವಕಾಶ ಮಾಡಿಕೊಟ್ಟಿರುವಿರಿ. ಇಡೀ ಭಾರತದಲ್ಲಿ ವಿಶೇಷವಾಗಿ ಉತ್ತರ ಭಾರತದಲ್ಲಿ ಸಂಖ್ಯೆಯ ದೃಷ್ಟಿಯಿಂದ ನೋಡಿದಾಗ ನಿಮಗಿಂತ ಅತ್ಯಲ್ಪ ಸಂಖ್ಯೆಯಲ್ಲಿದ್ದಾರೆ. ಆದರೂ ಇಷ್ಟ ಬಂದಂತೆ ನಿಮ್ಮ ಮೇಲೆ ಇವರು ಸವಾರಿಮಾಡಲು ಕಾರಣವೇನು? ನಿಮ್ಮ ಅಜ್ಞಾನ ಹಾಗೂ ಅನೈಕ್ಯತೆಯಿಂದಾಗಿ ಸ್ವತಂತ್ರ ಭಾರತದಲ್ಲಿಯೂ ಹಿಡಿಯಷ್ಟು ಸವರ್ಣೀಯರ ದಾಸರಾಗಿ ಬಾಳಬೇಕಾಗಿ ಬಂದಿದೆ".

ಪಂತರ ಮೇಲಾಗಿರುವ ಪರಿಣಾಮ ವಿವರಿಸುವುದು ಅನಾವಶ್ಯಕ. ನಿರ್ಭಯವಾಗಿ, ಪ್ರತ್ಯಕ್ಷವಾಗಿಯೇ ಗಡ್ಡ ಕೀಳುವ ಸಾಹಸಕ್ಕೆ ಅಂಬೇಡ್ಕರ್ ಕೈ ಹಾಕಿದ್ದಾರೆನಿಸಿತು. ಪಂತರು ವಲ್ಲಭಬಾಯಿ ಪಟೇಲರ ವಿಶೇಷ ಕೃಪೆಗೊಳಗಾಗಿದ್ದರು. ಕೂಡಲೆ ಪಂತರು ಕೆರಳುವ, ಅಪಮಾನಕರವಾದ ಭಾಷಣದ ಬಗ್ಗೆ ಪಟೇಲರಿಗೆ ದೂರಿ..ದ.. ಅಲ್ಲದೆ ಇಂತಹ ಭಾಷಣಗಳಿಂದ ಹಿಂದುಳಿದವರು ದಂಗೆ ಏಳಬಹುದೆಂದೂ ಎಚ್ಚರಿಸಿದರು.

ಪಟೇಲರು ನೆಹ್ರೂ, ಗಾಂಧಿಯವರಿಗೆ ಪಂತರ ಪತ್ರವನ್ನು ತೋರಿಸಿ ಅಂಬೇಡ್ಕರ್ ಕೊನೆಗೂ ವಿಷಸರ್ಪವಾಗಿ ಪರಿಣಮಿಸುತ್ತಿರುವರೆಂದು ಸೂಚಿಸಿದರು. ನೆಹ್ರೂ ಅವರು ಅಂಬೇಡ್ಕರರನ್ನು ಈ ಬಗ್ಗೆ ವಿಚಾರಿಸಿದಾಗ ಅವರು "ನಾನು ಹೇಳಿರುವುದೆಲ್ಲ ಅಕ್ಷರಶಃ ನಿಜ. ನಾನು ತಮ್ಮ ಮಂತ್ರಿಮಂಡಲದ ಸದಸ್ಯನಾಗಿದ್ದುಕೊಂಡು ನನ್ನ ಜನರು ತಪ್ಪು ದಾರಿಯಲ್ಲಿ ಹೋಗಲು ಬಿಡಲಾರೆ. ನನ್ನ ಆಂತರಿಕ ಆತ್ಮ ಧ್ವನಿಗೆ ವಿರುದ್ಧವಾಗಿ ಎಂದೂ ಏನೂ ಹೇಳಲಾರೆ. ಈ ರೀತಿ ತಾವುಗಳು ನನ್ನ ಆತ್ಮವನ್ನು ಸಾಯಿಸಲು ಯತ್ನಿಸಿದಲ್ಲಿ ಇಂದೇ ನನ್ನ ರಾಜೀನಾಮೆ ಸ್ವೀಕರಿಸಿ" ಎಂದು ಗುಡುಗಿದರು.

ಪಟೇಲರು ಮುಂದೆಂದೂ ಈ ರೀತಿ ಮಾತನಾಡದಂತೆ ಉಗ್ರವಾದ ಎಚ್ಚರಿಕೆ ನೀಡಲು ಇಚ್ಛಿಸಿದ್ದರು ಮತ್ತು ಪಂತರಲ್ಲಿ ಕ್ಷಮಾಪಣೆ ಕೇಳುವಂ-ತೆಯೂ ಆಶಿಸಿದ್ದರು. ಪಟೇಲರು ಉಕ್ಕಿನ ಮನುಷ್ಯರಾಗಿದ್ದರೆ, ಅಂಬೇಡ್ಕರರು ಹಿಮಾಲಯದಂತೆ ಅಚಲವಾಗಿದ್ದರು. ಇದನ್ನರಿತ ನೆಹ್ರೂ ಅವರು ಪಟೇಲರನ್ನು ಕುರಿತು "ಅಂಬೇಡ್ಕರರನ್ನು ನಾವು ಈಗ ಒತ್ತಾಯ ಪಡಿಸಿದ್ದೇ ಆದರೆ ರಾಜೀನಾಮೆ ಕೊಟ್ಟು ಮಂತ್ರಿಮಂಡಲ ತ್ಯಜಿಸುತ್ತಾರೆ. ಸಂವಿಧಾನದ ನೌಕೆ ಮುಳುಗಿಯೇ ಹೋಗುತ್ತದೆ. ಅದನ್ನು ನಡೆಸುವಂತಹವರು ನಮ್ಮಲ್ಲಿ ಯಾರೂ ಇಲ್ಲವೇ ಇಲ್ಲ. ಜಯಕರ್ ಸಪ್ರೂ ಈಗ ನಿರಾಕರಿಸಿದ್ದಾರೆ. ದಕ್ಷರೂ, ಕಾರ್ಯಶೀಲರೂ, ಅನುಭವಿಗಳೂ ಆದ ಅಂಬೇಡ್ಕರ್ ಅವರನ್ನು ಮೀರಿಸುವವರೇ ಇಲ್ಲ" ಎಂದು ಸಮಾಧಾನಗೊಳಿಸಲು ಯತ್ನಿಸಿದರು.

ಈ ಸಮಸ್ಯೆಯನ್ನು ಹೇಗಾದರೂ ಇತ್ಯರ್ಥ ಮಾಡಲು ನೆಹ್ರೂರವರು ಅಂಬೇಡ್ಕರರನ್ನು ಕುರಿತು "ಪಟೇಲರ ಕ್ರೋಧವನ್ನು ತಗ್ಗಿಸಬೇಕಾಗಿದ್ದಲ್ಲಿ ಉದ್ದೇಶ ಪೂರ್ವಕವಾಗಿ ಯಾರನ್ನೂ ಕುರಿತು ಆ ಮಾತು ಆಡಿದ್ದಲ್ಲ ಎಂದು ಒಂದು ಪತ್ರಿಕಾ ಹೇಳಿಕೆ ನೀಡಿ" ಎಂದು ಸಲಹೆ ಮಾಡಿದರು. ಅಂತೆಯೇ ಅಂಬೇಡ್ಕರರು ಪತ್ರಿಕಾ ಹೇಳಿಕೆ ನೀಡಿದರು. ಪಟೇಲರು ನಿರ್ವಾಹವಿಲ್ಲದೆ ತೆಪ್ಪಗಾದರು. ಸಂವಿಧಾನ ತಜ್ಞರು ಬೇರೆ ಯಾರಾದರೂ ಇದ್ದಿದ್ದಲ್ಲಿ ಅಂಬೇಡ್ಕರರು ಬಲಾತ್ಕಾರವಾಗಿ ಮಂತ್ರಿಮಂಡಲ ಬಿಡಬೇಕಾಗಿತ್ತು.

ಸಂಗ್ರಹ :

● ಕೆ. ನಾರಾಯಣಸ್ವಾಮಿ ಎಂ. ಎ.

೨

ಅಂಬೇಡ್ಕರರು ಕಾಂಗ್ರೆಸ್ ಮಂತ್ರಿಮಂಡಲದಲ್ಲಿದ್ದೂ ಸಮಯ ಸಿಕ್ಕಿದಾಗಲೆಲ್ಲ ಕಾಂಗ್ರೆಸ್ಸಿಗರನ್ನು, ಪಕ್ಷವನ್ನು ಕಟುವಾಗಿ ಟೀಕಿಸದೆ ಬಿಡುತ್ತಿರಲಿಲ್ಲ. ಇಂತಹ ಕಾಂಗ್ರೆಸ್ ವಿರೋಧಿಗಳನ್ನು ನೆಹ್ರೂರವರು ಮಂತ್ರಿಮಂಡಲದಲ್ಲಿ ಸೇರಿಸಿಕೊಂಡಿದ್ದು ಬಹಳ ಮಂದಿಗೆ ಆಶ್ಚರ್ಯಕರವಾಗಿತ್ತು. ಇದರ ಹಿಂದೆ ಕಾಂಗ್ರೆಸ್ಸಿನ ಸ್ವಾರ್ಥ ಹಾಗೂ ಮಹಾ ತಂತ್ರ ಅಡಗಿದ್ದಿತು. ಇದರ ಶಿಲ್ಪಿ ಗಾಂಧಿಯವರೆ ಆಗಿದ್ದರು.

ಪಟೇಲರಂತೂ ಅಂಬೇಡ್ಕರರನ್ನು ನಖಶಿಖಾಂತ ದ್ವೇಷಿಸುತ್ತಿದ್ದರು. ಅಂಬೇಡ್ಕರರು Constituent assemblyಗೆ ಆರಿಸಿ ಬರದ ಹಾಗೆ ವ್ಯಾಪಕ ಕ್ರಮಗಳನ್ನೇ ಕೈಗೊಂಡಿದ್ದರು. ಆದರೂ ಆರಿಸಿ ಬರುವುದನ್ನು ತಪ್ಪಿಸಲಾಗಲಿಲ್ಲ. ಇದರಿಂದ ಪಟೇಲರಂತೂ ಬಹಳ ಜಾಗರೂಕತೆಯಿಂದಿರಬೇಕಾಗಿದ್ದಿತು. ಅಂಬೇಡ್ಕರರು ಪಟೇಲರ ರಾಜಕೀಯ ಶತೃಗಳಾಗಿದ್ದರು. ಇತ್ತ ಗಾಂಧಿಯವರು ಅಂಬೇಡ್ಕರರನ್ನು ಹೇಗಾದರೂ ಮಾಡಿ ಮಂತ್ರಿಮಂಡಲದಲ್ಲಿ ಸೇರಿಸಿಕೊಂಡರೆ ಒಂದು ಪೆಟ್ಟಿಗೆ ಎರಡು ಹಣ್ಣು ದೊರೆತಂತಾಗುತ್ತೆ ಎಂದು ಭಾವಿಸಿದ್ದರು. ಮೊದಲನೆಯದಾಗಿ ರಾಜ್ಯಾಂಗ ರಚನೆಗೆ ಅರ್ಹರಾದ, ಸೂಕ್ತರಾದ ಬೇರೊಬ್ಬರು ಇಡೀ ಭಾರತದಲ್ಲಿಯೇ ಇರಲಿಲ್ಲ. ಎರಡನೆಯದಾಗಿ ಹರಿಜನರನ್ನು ಹಿಂದೂಗಳಿಂದ ಬೇರ್ಪಡಿಸುವಲ್ಲಿ ಮತ್ತೊಬ್ಬ ಜಿನ್ನಾ ಆಗಬಹುದಾದುದನ್ನು ತಪ್ಪಿಸಬೇಕಾಗಿತ್ತು. ಆದ್ದರಿಂದ ಗಾಂಧಿಯವರು ನೆಹ್ರೂರವರನ್ನು ಕುರಿತು "ಸಂವಿಧಾನ ರಚಿಸುವುದು ಅತ್ಯಂತ ಕಠಿಣ ಹಾಗೂ ದುಸ್ಸಾಧ್ಯವಾದುದು. ಸಂವಿಧಾನವನ್ನು ಅಂತವರು ನಮ್ಮ ಪಕ್ಷದಲಿ ಯಾರೂ ಇಲ್ಲವೇ ಇಲ್ಲ. ಸಪ್ರೂ ಹಾಗೂ ಜಯಕರ್ ಅವರಿಂದ ಸಾಧ್ಯವಾದರೂ ನಮ್ಮ ರಾಜಕೀಯ ಸಿದ್ಧಾಂತಗಳಿಂದ ಭಿನ್ನರಾದವರು. ಅವರು

(ಮುಂದಿನ ಪುಟಕ್ಕೆ)

.... **ಅಂಬೇಡ್ಕರ್ ಘಟನೆಗಳು** (ಮುಂದುವರಿದುದು)

ಹೊರಲಾರರು ಕೂಡಾ. ಅವರೇನಿದ್ದರೂ ಸಮಿತಿಯ ಸದಸ್ಯರಾಗಿರಬಹುದು" ಎಂದರು. ನೆಹ್ರೂ ಅವರು ಈ ಸಲಹೆಗೆ ತುಟಿಪಿಟ್ಟೆನ್ನಲಿಲ್ಲ. ಸರ್ದಾರ್ ಪಟೇಲರು ಸೋಲಲೇಬೇಕಾಯಿತು.

ರಾಜಕುಮಾರಿ ಅಮೃತಕೌರ್ ಅವರ ಮೂಲಕ ಅಂಬೇಡ್ಕರ್ ಅವರಿಗೆ ಸುದ್ದಿ ಮುಟ್ಟಿಸಿ ಕಾನೂನು ಮಂತ್ರಿ ಮತ್ತು ರಾಜ್ಯಾಂಗ ಕರಡು ರಚನೆಯ ಅಧ್ಯಕ್ಷರನ್ನಾಗಿ ಮಂತ್ರಿ ಮಂಡಲದಲ್ಲಿ ಸೇರಿಸಿಕೊಳ್ಳಲಾಯಿತು.

೩

ಒಮ್ಮೆ ಪಂಡಿತ ಮದನಮೋಹನ ಮಾಳವೀಯರು ಅಂಬೇಡ್ಕರರನ್ನು ಕುರಿತು "ಡಾ|| ಅಂಬೇಡ್ಕರ್ ನಿಮ್ಮವರೆಲ್ಲಾ ಕಪ್ಪಗಿರುವುದರಿಂದ ಸವರ್ಣೀಯ ಹಿಂದೂಗಳ ತಿರಸ್ಕಾರಕ್ಕೆ, ಅಸಹ್ಯತೆಗೆ ಗುರಿಯಾಗಿದ್ದಾರೆ. ನನಗೊಂದು ಉಪಾಯ ಹೊಳೆದಿದೆ ನಿಮ್ಮ ಹೆಂಗಸರೆಲ್ಲಾ ಗರ್ಭವತಿಯರಾದಾಗ ಜಾಲಿಕಾಯಿ ಸಿಪ್ಪೆಯ ಪೌಡರ್ ಮಾಡಿಸಿ ತಿನ್ನಲು ಕೊಟ್ಟರೆ, ಹುಟ್ಟುವವರೆಲ್ಲಾ ಬೆಳ್ಳಗಿರುತ್ತಾರೆ. ಸವರ್ಣೀಯರು ಅಸಹ್ಯಪಡುವುದಿಲ್ಲ" ಎಂದು ಸಲಹೆ ಮಾಡಿದರು.

ಆಗ ಅಂಬೇಡ್ಕರರು ಕೂಡಲೆ ಉತ್ತರಿಸಿದರು–"ದಕ್ಷಿಣ ಭಾರತದ ಆಂಧ್ರ, ಮೈಸೂರು, ಕೇರಳ, ಮದರಾಸು ಪ್ರಾಂತ್ಯಗಳಲ್ಲಿನ ಬ್ರಾಹ್ಮಣರೂ ಕಪ್ಪಗಿರುತ್ತಾರೆ. ಆದ್ದರಿಂದ ಮೊದಲು ತಾವು ತಮ್ಮ ಬ್ರಾಹ್ಮಣ ಗರ್ಭವತಿಯರಿಗೆ ಈ ಪೌಡರನ್ನು ಕೊಟ್ಟು ಏಕೆ ಪ್ರಯೋಗ ಮಾಡಬಾರದು?"

ಅಂಬೇಡ್ಕರರ ಈ ಮಾತು ಕೇಳಿ ಮಾಳವೀಯರು "ಎಷ್ಟೇ ಆಗಲಿ ನೀವು ವಕೀಲರಲ್ಲವೆ?" ಎಂದರು.

೪

ಅಂಬೇಡ್ಕರರು ವೈಸ್‌ರಾಯ್‌ರವರ Executive Cocuncilನ ಸದಸ್ಯರಾಗಿದ್ದರು. ಒಂದು ದಿನ ತಮ್ಮ ಮನೆಯ ವರಾಂಡಾದಲ್ಲಿ ಹಲವರು ಮಿತ್ರರೊಡನೆ ಮಾವಿನ ಹಣ್ಣುಗಳ ಬುಟ್ಟಿಯನ್ನಿಟ್ಟುಕೊಂಡು ಹಣ್ಣುಗಳನ್ನು ಹೀರುತ್ತಿದ್ದರು. ಬಾಗಿಲಲ್ಲಿ ಆಫೀಸಿನ ಜವಾನನೂ ನಿಂತಿದ್ದ. ಅಂಬೇಡ್ಕರರು ಅವನನ್ನೂ ಆಹ್ವಾನಿಸಿದರು. ಅವನು ಹೆದರುತ್ತ ಹೆದರುತ್ತ ಒಂದೆರಡು ಹಣ್ಣನ್ನು ಬುಟ್ಟಿಯಿಂದ ತೆಗೆದುಕೊಂಡು ದೂರಹೋಗಿ ಹೀರಲು ನಡೆದ. ಅಂಬೇಡ್ಕರರು ಬಲಾತ್ಕಾರವಾಗಿ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡರು. ಆಗ ಅವರ ಮಿತ್ರರೊಬ್ಬರು "ಇದೇನು, ತಮ್ಮ ಅಧಿಕಾರ ಅಂತಸ್ತನ್ನು ಮರೆಯುತ್ತಿರುವಿರಲ್ಲಾ! ತಾವು ವೈಸರಾಯ್‌ರವರ Executive Council ಸದಸ್ಯರು. ಪ್ರಾಂತ್ಯಗಳ ಗವರ್ನರ್ ಹುದ್ದೆಗೆ ಸಮನಾದುದು ತಮ್ಮ ಸ್ಥಾನ. ಒಬ್ಬ ಸಾಮಾನ್ಯ ಜವಾನನನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಳ್ಳುವುದೆ? ಇದು ನಿಯಮಗಳಿಗೆ ವಿರುದ್ಧ" ಎಂದರು.

ಅಂಬೇಡ್ಕರರು ಮಹಾಮಾನವತಾವಾದಿಗಳಾಗಿದ್ದರು. ಆಗ ಅವರು ಹೇಳಿದರು—"ಮಾನವೀಯತೆಯ ಸ್ಥಾನ ಕೌನ್ಸಿಲ್ ಸದಸ್ಯತ್ವವಷ್ಟೇ ಏಕೆ? ವೈಸರಾಯ್‌ರವರ ಸ್ಥಾನಕ್ಕಿಂತಲೂ ಉನ್ನತವಾದುದು. ನಾನೂ ಮಾನವನಾಗಿರುವುದರಿಂದ ಒಬ್ಬ ಪ್ರಾಮಾಣಿಕ ನಿಷ್ಠಾವಂತ ಜವಾನನನ್ನು ಮಾನವನಾಗಿಯೇ ಕಾಣುತ್ತೇನೆ. ಸರ್ಕಾರಿ ಕಾರ್ಯದ ನಿಮಿತ್ತ ಕುರ್ಚಿಯಮೇಲೆ ಕುಳಿತಾಗ ನನ್ನ ಹಾಗೂ ಜವಾನನ ಸ್ಥಾನದಲ್ಲಿನ ವ್ಯತ್ಯಾಸಕ್ಕನುಗುಣವಾಗಿ ವ್ಯವಹರಿಸುತ್ತೇನೆ. ಕೊಲಂಬಿಯಾದ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರು ತಮ್ಮ ಕರ್ತವ್ಯ ಮುಗಿಸಿದ ಮೇಲೆ ತಮ್ಮ ಆಳುಕಾಳುಗಳೊಡನೆ ಒಟ್ಟಾಗಿ ಕುಳಿತು ಕಾಫಿ–ತಿಂಡಿ ಸ್ವೀಕರಿಸುವಲ್ಲಿ ಅವಮಾನ ಅಥವಾ ಪ್ರತಿಷ್ಠೆಗೆ ಕುಂದು ಎಂದು ಭಾವಿಸುವುದಿಲ್ಲ. ಆದರೆ ಈ ದೇಶದಲ್ಲಿ ಮಾತ್ರವೆ 24 ಗಂಟೆಯೂ ಮಾನವನ ತಲೆಯಲ್ಲಿ ಉಚ್ಚ–ನೀಚ, ಮೇಲು–ಕೀಳು ಎಂಬ ಭಾವನೆಗಳು ತುಂಬಿರುತ್ತವೆ. ಈ ಅಮಾನುಷ ಪ್ರವೃತ್ತಿ ನನಗೆ ಹಿಡಿಸದು. ನನ್ನ ಈ ಜವಾನ ಓದು ಬರಹ ಕಲಿತಿಲ್ಲವಾದ್ದರಿಂದ ಉನ್ನತ ಹುದ್ದೆ ಸಿಕ್ಕಿಲ್ಲ. ಆದರೆ ಅವನು ನಮ್ಮ ನಿಮ್ಮಂತೆ ಒಬ್ಬ ಮನುಷ್ಯ ಮಾತ್ರ. ಅವನು ನನ್ನ ಲೇಖನಿ ಕಸಿದುಕೊಂಡಿಲ್ಲ. ಕೇವಲ ಒಬ್ಬ ಮಾನವನಾಗಿ ನಮ್ಮ ಜೊತೆಯಲ್ಲಿ ಕುಳಿತು ತಿಂದರೆ ನನ್ನ ಪ್ರತಿಷ್ಠೆ ಕುಗ್ಗುವುದಿಲ್ಲ". ★

ಕಪ್ಪು ಚಿರತೆಯ ಡಂಗುರ

● ರಾಮುದೇವ ರಾಕೆ

ಇಂಡಿಯಾ—
ನಾನೊಬ್ಬ ಕಲಿತ ಬಿಸಿರಕ್ತದ ಕಪ್ಪು ಹುಡುಗ
ಇಂದಿನ ಅಸಮಾನತೆಗೆ, ದಬ್ಬಾಳಿಕೆಗೆ, ಶೋಷಣೆಗೆ, ಜಾತಿ ವ್ಯವಸ್ಥೆಗೆ
ಊಳಿಗ ಮಾನ್ಯ ಪದ್ಧತಿಯ ಕ್ರೂರ ಹಿಂಸೆಗೆ
ಎದುರಾಗಿ ಬುಲೆಟ್ ತುಂಬಿ ರೆಡಿಯಾದ ಬಂದೂಕ.

ಇಂಡಿಯಾ-
ನಿನ್ನ 5000 ವರ್ಷಗಳ ಇತಿಹಾಸ ತಿರುವಿದ್ದೇನೆ
ಗೀತೆ, ವೇದ, ಪುರಾಣ, ಧರ್ಮ ಇಂಥ ವಗೈರೆ ವಗೈರೆ
ವಿಷಬೀಜಗಳ ಪರಿಸಿ ಸುಟ್ಟಿದ್ದೇನೆ.
ಯಾಕೆ ಗೊತ್ತಾ ?
ಅಲ್ಲಿ ನನಗೆ ಕಂಡದ್ದು
ನಿನ್ನ ವೈಭವದ ಈಸ್ಟ್‌ಮನ್‌ಕಲರ್ ಚಿತ್ರಗಳಲ್ಲ;
ನೋವು, ನಿರಾಸೆ, ಎಲ್ಲವನ್ನೂ ತುಂಬಿಕೊಂಡು
ಕ್ರೂರ ಹಿಂಸೆಗೆ ತುತ್ತಾಗಿ ನೆಲಹಿಡಿದ
ನನ್ನ ಜನರ ದುರಂತ ಕಥೆಯನ್ನ.

ಅದೆಲ್ಲಾ ಹಳೆ ಮಾತು ಅಂತ ತೇಲಿಸಿಬಿಟ್ಟರೆ

ಇಕಾ —
ಸಾವಿರದ ಒಂಬೈನೂರ ಎಪ್ಪತ್ತಾರರ ಕಥೆ ಉಂಟಲ್ಲಾ ಹೊಸತಾಗಿಯೇ
ಅದಕ್ಕೇನೇಳುತ್ತೀಯ ಜವಾಬು?
ಅಂದಾಗ; ನಿನ್ನ ಬಾಯಿ ಕಟ್ಟುತ್ತದೆ.

ಕಾಂಗ್ರೆಸ್ ಒಡೆಯಾ ಇದು ನಿನಗೆ —
ನಿನ್ನ ಪಂಚವಾರ್ಷಿಕ ಯೋಜನೆಗಳಿಂದಾದದ್ದೇನು
ಕೇಳಿದರೆ, ನೀನು—
ಬಿರ್ಲಾನಿಂದಿಡಿದು — ಮಾರುತೀ ಕಾರಿನವರೆಗೆ
ನೂರೆಂಟು ಅಸಮಾನತೆಗಳ ಪಟ್ಟಿಕೊಟ್ಟು ಬಿಡುತ್ತೀಯ
ಅದು ನಿನಗೆ ಮಹತ್ವದ್ದೆನಿಸುತ್ತದೆ.
ಕೋಟಿ ಕೋಟಿ ಚೆಲ್ಲಿ ಚಂದ್ರನಗರಿಗೇರಿದ್ದು
ಬಾಂಬ್ ಸ್ಫೋಟಿಸಿದ್ದು, ಆರ್ಯಭಟನಟ್ಟಿದುದನ್ನು
ಹೇಳುತ್ತಾ ಜಂಬ ಕೊಚ್ಚುತ್ತೀಯಾ
ಮುಚ್ಚು ಬಾಯಿ—
ನಿನ್ನ ಯೋಜನೆಗಳಿಂದ ದಲಿತರು, ಭೂಹೀನರು, ಬಡರೈತರಿಗೆ
ಅನ್ನ ಸಿಕ್ಕಿತಾ?
ಸಮಾಜವಾದ, ಗರೀಬಿ ಹಟಾವೋ, ಹಸಿರು ಕ್ರಾಂತಿ, ಜನತಾ ಆಡಳಿತ
ಇಂಥ ಗಿಲೀಟು ಘೋಷಣೆಗಳ ಎತ್ತಿ ಎತ್ತಿ ಹೇಳಿದೆಯಲ್ಲಾ
ಅನ್ನ ಸಿಕ್ಕಿತಾ ನನಗೆ
ನನ್ನೊಡಹುಟ್ಟಿದ ದಲಿತರಿಗೆ.
ಗೊತ್ತು ನನಗಿದೆಲ್ಲವೂ
ಇಲ್ಲಿಯ ತನಕ ನೀನು ಹಾಕಿದ ಮುಖವಾಡಗಳ
ಹಿಂದಿನ ಮುಖ ನನಗೆ ಗೋಚರಿಸುತ್ತದೆ
ಅದಕ್ಕೇನೂ ಭೂತಗನ್ನಡಿ ಹಿಡಿದು
ಹುಡುಕಬೇಕಿಲ್ಲ—ಹುಡುಕಬೇಕಿಲ್ಲ.

ಇಂಡಿಯಾ—
ನೋಡು—
ಮನೆಯಿಲ್ಲ—ಉಣಲಿಲ್ಲ – ಉಡಲಿಲ್ಲ
ಸರಾಗ ಬದುಕಲೇನೂ ಇಲ್ಲದ
ಅನ್ನ ಅನ್ನ ಎಂದರಚಿ ದಿಕ್ಕು ದಿಕ್ಕಿಗೂ ಅಲೆವ
ಬೆತ್ತಲೆಯ ಫುಟ್‌ಪಾತ್ ದಲಿತ ಬಾಂಧವರ
ಜಠರೊಳಗಿನ ಕಿಚ್ಚಿನ ಬಿಸಿ ತಟ್ಟಲಿಲ್ಲ ನಿನಗೆ.
ನೋಡು ನೋಡು
ಕಿಚ್ಚು ತುಂಬಿಕೊಂಡ ಹೊಲೆಮಾದಿಗರಾಲಾಪಕೇರಿಗಳ
ಶತ ಶತಮಾನಗಳುರುಳಿದರೂ ಕತ್ತಲ ವ್ಯೂಹದೊಳಗೊದ್ದಾಡಿ
ಉಸಿರು ಬಿಟ್ಟು—ಎಳೆದೂ ಮಾಡುವ ಸತ್ತವರ ನೋಡು.
ಹಗಲಲ್ಲದ ಇದು—ಇರುಳಲ್ಲದ ಇದು
ಅನ್ನುವುದೇನೂ ಇಲ್ಲದೆ ದುಡಿದು ದುಡಿದು
ಹಸಿದ, ಬೆವತ ಮುಖಗಳ
ಅಸ್ಥಿಪಂಜರಳ ಯಾಸ ನೋಡು.
ಮಾಡಿದಪ್ಪನ ಸಾಲಕ್ಕೆ ಮಾತ ಕಲಿಯುವ ಮುಂಚೆ
ದಣಿಗಳ ಮನೆಯ ತೊತ್ತಾಗುವ ಕ್ಯೂ ನಿಂತ ಆಳುಗಳ
ಇವರ ರಕ್ತವೇ ಬೆವರಾಗಿ ಬೆನ್ನೆಲುಬಾಗುವುದು
ಸಾಹುಕಾರರ ಮನೆಗೆ, ಮತ್ತು ಅವರು ನೆಟ್ಟಗೆ ನಿಂತ
ಇನ್ನೆಷ್ಟೋ ಇತ್ಯಾದಿ ಇತ್ಯಾದಿಗಳಿಗೆ.
ಅಸಹಾಯಕ ನನ್ನಪ್ಪ ಅಣ್ಣ ತಮ್ಮಂದಿರ ಎದುರೇ
ನನ್ನವ್ವ, ಅಕ್ಕ,ತಂಗಿಯರ ಸೀರೆ ಸೆಳೆದು
ಹಾಡು ಹಗಲೇ ಸಂಭೋಗಿಸುವುದ ಕಂಡು
ನನ್ನ ರಕ್ತ ಕುದಿಯುತ್ತದೆ.
ದಿನವೂ ಕೊಲೆ ಸುಲಿಗೆಗೆ ಸಿಕ್ಕಿ ತತ್ತರಿಸುವ
ನನ ಹತಾಶ ಮುಗ್ಧ ಜನತೆಯ ಕಂಡು
ನನ್ನೊಡಲ ಬೆಂಕಿ ಧಗಧಗಿಸುವುದಿಲ್ಲವಾ ಹೇಳು?
ಹೀಗೆ ಕೇಳಿದರೆ ನಿನ್ನ ನಾಲಿಗೆ ಏಳುವುದೇ ಇಲ್ಲ.
ಇಂಡಿಯಾ—
ಇಲ್ಲೆ, ಇಲ್ಲೆ ಸತ್ತ ಬದುಕ ಬದುಕುವ ನನಗೆ
ಇಲ್ಲೆ ಅಡ್ಡಾಡುವ ನನಗೆ
ಇಲ್ಲೆ ಹುಟ್ಟಿಕೊಂಡಿದ್ದು ಬೆಂಕಿ.
ಕಬಳಿಸುತ್ತಿರುವ ನನ್ನ ಕಡು ದಾರಿದ್ರ್ಯ ಭಯಾನಕ
ಗಹಗಹಿಸುವುದು ನಾಳೆಗಳ ಇಂದೇ ತಂದು.
ಇದಕ್ಕುತ್ತರ ಇದೆಯಾ ನಿನ್ನಲ್ಲಿ ?
ಇದೆಲ್ಲ ಕಂಡೂ
ಸುಮ್ಮನೆ ಒಳಗೆ ಕುದಿಕುದಿದು
ದಹಿಸುತ್ತಾ ಕೂರಲಾರೆ.
ನನ್ನ ಜನರ ಕಿಚ್ಚು ತುಂಬಿಕೊಂಡವ
ನಾನು, ನನ್ನವರು ಬದುಕಬೇಕು
ನಿಜ ಬದುಕ ಬದುಕಬೇಕು.
ಆದ್ದರಿಂದಲೇ ಸುಮ್ಮನೆ ಕೂರುವುದಂತು
ನನ್ನಿಂದ ಖಂಡಿತಾ ಸಾಧ್ಯವಿಲ್ಲ.
ಇಂಡಿಯಾ
ಹೇಳಿದೆನಲ್ಲ, ನಾನೊಬ್ಬ ಕಲಿತ ಬಿಸಿರಕ್ತದ ಕಪ್ಪು ಹುಡುಗ
ಇಂಥ ಅಸಮಾನತೆಗಳ ಎದುರು ಎದೆ ಎತ್ತಿ
ಸಿಡಿಯುತ್ತ ನಿಂತಿರುವ ಬುಲೆಟ್ ತುಂಬಿದ
ಬಂದೂಕ ನಾನು.

●

with best compliments
from

Sri SARVODAYA MEDIDAL STORE

M. Mallappa
proprietor

Malavally

ಮಾಡರ್ನ್ ರೈಸ್ ಮಿಲ್
ಮಳವಳ್ಳಿ

ಎನ್. ಸುಬ್ಬೇಗೌಡ
ಅಧ್ಯಕ್ಷರು

ಶುಚಿ, ರುಚಿಯಾದ ತಿಂಡಿಗಳಿಗೆ ಒಮ್ಮೆ ಭೇಟಿ ನೀಡಿ

ಹೋಟೆಲ್ ಅಚ್ಚುತಾನಂದ ಭವನ್
ಮಳವಳ್ಳಿ

ಅಚ್ಚುತಾನಂದ
ಮಾಲೀಕರು

With Best Compliments
from

P. D. JOSEPH
BUILDINGS CONTRACTOR

Mysore

---

with best compliments
from

Sri KRISHNA MEDICAL STORE

M. V. Krishnappa & Sons
PROPRITOR

Malavalli

ಮಳವಳ್ಳಿ ತಾಲ್ಲೂಕು
ಕೋಳಿ ಸಾಕಾಣಿಕೆದಾರರ ಸಹಕಾರ ಸಂಘ ನಿಯಮಿತ
ಮಳವಳ್ಳಿ

ಹೆಚ್. ತಿಮ್ಮೇಗೌಡ
ಅಧ್ಯಕ್ಷರು

ಹಾರ್ದಿಕ ಶುಭಾಶಯಗಳೊಡನೆ

ಶ್ರೀ ಲಕ್ಷ್ಮೀ ನರಸಿಂಹ ಸಹಕಾರ ಮಾರುಕಟ್ಟೆ ಸಂಘ ಲಿ.

ಮಳವಳ್ಳಿ

ಕೆಂಪಯ್ಯ
ಅಧ್ಯಕ್ಷರು

WITH BEST COMPLIMENTS
from

MAHADEV

Buildings Contractor
Mysore

ಅಸ್ಪೃಶ್ಯತೆ: ನನ್ನ ಅನುಭವ

ರಾಷ್ಟ್ರೀಕೃತ ಬ್ಯಾಂಕಲ್ಲಿ..........

ಅದೊಂದು ರಾಷ್ಟ್ರೀಕೃತ ಬ್ಯಾಂಕು. 20 ಅಂಶ ಕಾರ್ಯಕ್ರಮವನ್ನು ಜಾರಿಗೆ ತರುವ ಬಿಸಿಯಲ್ಲಿತ್ತು ಅದು. "ಬರ್ರೀ ಒಳಗ್ಬರ್ರೀ, (ಜವಾನನಿಗೆ) ಲೋ, ಒಂದೆರಡು ಚೇರ್ ಹಾಕೊ ಒಳಗೆ, ನೀವು ಬನ್ನಿಯಮ್ಮ, ಒಳಗೆ ನಡೀರಿ, ಏನ್ಬೇಕಾಗಿತ್ತು, ರೊಕ್ಕ ತುಂಬಬೇಕಿತ್ತ, ಎಷ್ಟು ಯಾವ ಖಾತೆಗೆ? ಸಾಲದ ಖಾತೆಗೋ?" ಎನ್ನುತ್ತ ಅವರ ಕೈ ಹಿಡಿದು ಸಹಿ ಹಾಕಿಸಿ ರೊಕ್ಕ ಕೊಂಡೊಯ್ದು ತಾನೆ ಕ್ಯಾಷ್ ಕೌಂಟರಿನಲ್ಲಿ ಕೊಟ್ಟು, ಆಕೆಗೆ ಪಾವತಿ ಕೊಡುತ್ತಿದ್ದ ಕ್ಲಾರ್ಕ್. ಇದನ್ನು ಕಂಡು ಒಬ್ಬ ದಲಿತ ಮಹಿಳೆ ಬಹುಶಃ ಹೆಂಗಸರಿಗೆ ಒಳಗೆ ಜಾಗ ಇರಬೇಕು ಎಂದು ಒಳಗೆ ಬರುವ ಸಿದ್ಧತೆಯಲ್ಲಿದ್ದಳು. ಆಗ ಅದೇ ... 'ಏನಬೆ? ಏನ್ಬೇಕು? ಎಲ್ಲಿಗೆ ಬರ್ಲಿಕ್ಕತ್ತಿದ್ದಿ? ಇದೇನು ಬ್ಯಾಂಕೋ ಸೇಂದಿ ಅಂಗಡಿಯೋ ನೆಟ್ಟಗೆ ನುಗ್ಗುತ್ತೀಯಲ್ಲ. ದೂರ ಸರಿ. ಅಲ್ಲಿ ದೂರದಲ್ಲಿ ನೆಲ್ದ ಮೇಲೆ ಕೂಡು. ಬಂದ್ಬಿಟ್ಲು ಸಲೀಸಾಗಿ, ಸೂಳೆ ಮಕ್ಕಳಿಗೆ ಏನೂ ಗೊತ್ತಾಗಲ್ಲ ಬಂದ್ಬಿಡ್ತಾವೆ. ಏನ್ಮಾಡ್ಬೇಕು ಸಾಲಕ್ಕ ರೊಕ್ಕ ತುಂಬಬೇಕೇನು? ಅಲ್ಲೆ ಕೂಡು ಪಾವತಿ ಮಾಡ್ಕೊತೀನಿ. ಸಾಲ ತಕ್ಕೊಂಡೋಗಿ ಎಷ್ಟು ದಿನ ಮನೆಮುಂದಿಯೆಲ್ಲ ಕುಡುದ್ರಿ? ಈ ಬೋಳಿ ಮಕ್ಕಳಿಗೆ ಸಾಲ ಬೇರೆ ಕೇಡು. ಬರೋ 4% ಬಡ್ಡಿಗೆ ಇವ್ರಿಗೆಲ್ಲ ಚಾಕರಿ ಮಾಡ್ಬೇಕು". "ಯಾಕ್ರಿ ಸಾಹೇಬ್ರ ಸಿಟ್ಮಾಡ್ತಿರಿ ನಂಗೆ ತಿಳೀಲಿಲ್ರಿ. ಅವರು ಒಳಗೋದ್ರು ಅಂದ್ಕೊಂಡು ನಾನು ಒಳಗೆ ಬಂದ್ಬಿಟ್ಟೆ. ನಿಂ ಕಾಲಿಗೆ ಬಿದ್ದೀನ್ರಿ ಯಪ್ಪಾ ಕಾಲಿಗೆ ಬಿದ್ದೀನ್ರಿ. ಪಾವತಿ ಮಾಡಿಕೊಡಿ" ಹೆಂಗಸು ಗೋಗರೆದಳು. "ಕೂಡಬೆ ಅಲ್ಲೆ ದೂರ ಕೂಡು ಕರಿತೀನಿ. ಎಷ್ಟು ಮಾತಾಡ್ತಿ ಹೊಲಸು ಬಾಯಲ್ಲಿ". ಅಷ್ಟರಲ್ಲಿ ಇನ್ನೊಂದು ಹೆಣ್ಣು ಬಂತು. "ಏನ್ರಿ ಏನು ಬೇಕಿತ್ತು ಬರ್ರೀ ಒಳಗೆ ಬರ್ರಿ ಕೂಡ್ರಿ ..." ಹಿಂಗೇ ಸಾಗಿತ್ತು ಸಂಭಾಷಣೆ. ದಲಿತ ಮಹಿಳೆ ಬೆಪ್ಪರಗಾಗಿ ಕುಳಿತಿದ್ದಳು ಎಲ್ಲವನ್ನೂ ನೋಡುತ್ತಾ; ಅವನ ಕರೆಗಾಗಿ ಕಾಯುತ್ತ. ಇದೆಲ್ಲವನ್ನೂ ನೋಡುತ್ತ ನಿಂತಿದ್ದ ನಾನು ಕಂಡೂ ಕಾಣದಂತೆ ಅಲ್ಲಿಂದ ಬೇಗ ಕಾಲುಕಿತ್ತೆ --ನನ್ನ ಜಾತಿ ಗೊತ್ತಾದರೆ ನಾನೂ ಇದನ್ನೇ ಅನುಭವಿಸಬೇಕಾಗುತ್ತದೆಂದು.

● ದುರ್ಗಪ್ಪ ಬೆಳಗಾಂ

○

ಕಬಡ್ಡಿ ಕಬಡ್ಡಿ ಕಾಲಲ್ಲಿ ಮುಟ್ಟಬೇಡ.......

1976ರಲ್ಲೀ ಕೆಲವು ದಿನಗಳ ಹಿಂದೆ ಕೆ. ಆರ್. ನಗರ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಸವರ್ಣೀಯ ಮತ್ತು ಹರಿಜನ ಯುವಕರ ಮಧ್ಯೆ ಕಬಡ್ಡಿ ಏರ್ಪಟ್ಟಿತ್ತು. ನಾವು (ಹರಿಜನ) ಕಬಡ್ಡಿ ಆಟ ಆಡುತ್ತಿದ್ದಾಗ ನಮ್ಮ ಕಡೆಯ ಆಟಗಾರನೊಬ್ಬ ಸವರ್ಣೀಯ ಆಟಗಾರನೊಬ್ಬನಿಗೆ ಕಾಲು ತಾಗಿಸಿ ಔಟು ಮಾಡಿ ಗೆರೆ ಮುಟ್ಟುವುದರಲ್ಲಿದ್ದನು. ಆ ಮೇಲ್ಜಾತಿ ಆಟಗಾರರು ಆಟವನ್ನು ನಿಲ್ಲಿಸಿ ಕೋಪಗೊಂಡು ನಿಂತಿದ್ದರು. ನಾವು ಹರಿಜನ ಆಟಗಾರರು ಏನಾಯ್ತು ಎಂದು ಕೇಳಿದೆವು. ಅದಕ್ಕೆ ಅವರು ಮೇಲ್ಜಾತಿಯವರು ಅನ್ನುವ ನಿಗಾ ಇಲ್ದೆ ನಿಮ್ಮವನು ಕಾಲು ಮುಟ್ಟಿಸುತ್ತಾನಲ್ಲ ಸರಿಯಾ? ಎಂದು ರೋಪು ಹಾಕಿದರು. ನಾವು ಬೆರಗಾಗಿ ಸರಿಯಪ್ಪ ನೀವೇ ಗೆದ್ದಿರಿ ಎಂದು ಬರೆದುಕೊಟ್ಟು ವಾಪಸ್ಸು ಬಂದೆವು.

● ಅವಮಾನಿತರು, ಗೊರಗನಹುಂಡಿ

ಪ್ರೀತಿ ಮಾತು........

ನರಸಿಪುರದಲ್ಲಿ ಸಿನಿಮಾ ನೋಡಿಕೊಂಡು ಹೊರಬರುವಷ್ಟರಲ್ಲಿ ಮಾತಾಡುತ್ತಾ ಆಮತ್ತ ಒಬ್ಬ ಚೆನ್ನಾಗಿ ಪರಿಚಯಸ್ಥನಾದ. ಊರಿಗೆ ವಾಪಸ್ಸು ಹೋಗಲು ಬಸ್ಸಿಗೆ ಕಾದ್ವೆ. ಬಸ್ಸು ಸಿಕ್ಕಲಿಲ್ಲ. ಇನ್ನೂ ಸಂಜೆ ಐದುವರೆ ಗಂಟೆಯಾದ್ದರಿಂದ ನಡೆದುಕೊಂಡೇ ಹೊದರಾಯಿತೆಂದು 3ಮೈಲು ದೂರವಿರುವ ನಮ್ಮೂರಿನ ಕಡೆ ಹೊರಟೆ. ಪರಿಚಯ ಆದ ವ್ಯಕ್ತಿ 'ನಾನೂ ಆಕಡೆ ಬರ್ತೀನಿ ಸ್ವಾಮಿ' ಎಂದು ನನ್ನ ಜೊತೆ ಸೇರಿದ. ನೋಡಲು ನನಗಿಂತ ವಯಸ್ಸಾದ ವ್ಯಕ್ತಿ. ಕೊಳಕಾದ ಬಿಳಿ ಮಾಸಲು ಅಂಗಿ ಪಂಚೆ ಹಾಕಿಕೊಂಡಿದ್ದ. ಬಿ. ಎ. ಓದುತ್ತಿದ್ದ ನಾನು ನೀಟಾದ ಟೆರಿಕಾಟ್ ಬಟ್ಟೆ ಪ್ಯಾಂಟು ಷರಟು ಹಾಕಿಕೊಂಡಿದ್ದೆ. ದಾರಿಯುದ್ದಕ್ಕೂ ಅದೂ ಇದೂ ಮಾತಾಡುತ್ತಾ, ಮಧ್ಯೆ ಮಧ್ಯೆ ಸಿನೇಮಾ ನಾಯಕನ ಬಗ್ಗೆ ವಿವರಿಸುತ್ತಾ ಮೆಚ್ಚುತ್ತಾ ಬರುತ್ತಿದ್ದೆವು. ಅವನು ಎಲ್ಲಾ ಹೇಳಿದ ಮೇಲೆ ನನ್ನನ್ನು "ಅಲ್ವಾ ಸ್ವಾಮಿ" ಅನ್ನುವುದು "ನೀವು ಏನನ್ನುತ್ತೀರಿ" ಎಂದು ಕೇಳುವುದು ಮಾಡುತ್ತಿದ್ದ. ಹೀಗೆ ಪರಸ್ಪರ "ಪ್ರೀತಿಯಿಂದ" ಮಾತಾಡುತ್ತಾ ಬರುತ್ತಿದ್ದೆವು. "ತಾವು ಏನು ಓದ್ತಾ ಇದ್ದೀರಿ" ಅಂದ. "ಬಿ. ಎ." ಅಂದೆ. ಮತ್ತೆ "ಇಲ್ಲಿ ತಮ್ಮ ಊರು ಯಾವುದು ಸ್ವಾಮಿ" ಅಂದ. "ಸಿದ್ದನಹುಂಡಿ" ಅಂದೆ ಅಷ್ಟೆ. ಅವನ ಮುಖವೇ ಒಂದು ಥರ ಆಯಿತು. (ಸಿದ್ದನಹುಂಡಿಯಲ್ಲಿ ಇರುವವರು ಬರಿ ಹರಿಜನರೇ ಎನ್ನುವುದು ಅವನಿಗೆ ಗೊತ್ತು) "ಓಹೊ.... ಹಾಗೊ ನಿನ್ನ ಹೆಸರೇನ್ಲ" ಅಂದ. "ಯಾಕೆ" ಅಂದೆ. ಮತ್ತೆ ಅವ ಮಾತಾಡಲಿಲ್ಲ. ಅಸಹ್ಯಪಟ್ಟುಕೊಂಡವನಂತೆ ಬಿರಬಿರನೆ ನನ್ನನ್ನು ಹಿಂದಕ್ಕೆ ಸಿಕ್ಕಿಸಿ ಮುಂದೆ ಹೊರಟುಹೋದ.

● ಎಂ. ರಂಗಸಾಮಿ, ಸಿದ್ದನಹುಂಡಿ

○

ಬಾ ಬಾ ಸಾಯಿ ಸಾಯಿ

ನಮ್ಮೂರಲ್ಲಿ ಕೆಲವರು ಒಂದು ಶ್ರೀ ಸತ್ಯಸಾಯಿಬಾಬಾ ಭಜನಾ ಮಂಡಳಿ ಕಟ್ಟಿದ್ದಾರೆ ಇದರ ಆಶ್ರಯದಲ್ಲಿ ಅವರು ಪ್ರತಿವಾರವೂ ಸಾಯಿಬಾಬ್ರ ಭಜನೆಯನ್ನು ಮಾಡುತ್ತಿದ್ದರು. ಒಂದು ದಿನ ನನ್ನ ಸ್ನೇಹಿತನೊಬ್ಬ ನನ್ನನ್ನೂ 'ಭಜನೆಗೆ ಬಾ' ಎಂದ. ಬಲವಂತಕ್ಕಾಗಿ ಹೋದೆ. ಅಲ್ಲಿ ನನಗೆ ಸಾಯಿ ಬಾಬಾನ ಪುಸ್ತಕಗಳನ್ನು ಓದು ಎಂದು ಕೊಟ್ಟರು. ನನ್ನನ್ನು ಆ ಮಂಡಳಿಯ ಮೆಂಬರನ್ನಾಗಿಯೂ ಮಾಡಿಕೊಂಡರು. ಹೀಗೆ ಒಂದೆರಡು ದಿನ ಆದಮೇಲೆ ನನಗೆ ಕೊಟ್ಟಿದ್ದ ಪುಸ್ತಕಗಳನ್ನು ವಾಪಸು ಈಸಿಕೊಂಡರು. ಭಜನೆಗೆ ಹೋದಾಗ 'ಈ ದಿನ ವಿಶೇಷ ಕಾರ್ಯಕ್ರಮವಿದೆ, ನೀನು ಹೊಗು ಎಂದರು. ಅರ್ಥವಾಗದೆ ಬಂದುಬಿಟ್ಟೆ. ನನ್ನ ಸ್ನೇಹಿತನನ್ನು ಕೇಳಿದೆ. ಸ್ನೇಹಿತ ನೀನ್ ಹರಿಜನ ವಿದ್ಯಾರ್ಥಿ ಅಂತ ಗೊತ್ತಾಯ್ತು ಅದಕ್ಕೆ ಹೀಗೆ' ಅಂದ. ಬೇಕಂತ ಭಜನೆಗೆ ಹೋಗಬೇಕೆನಿಸಿತು, ಹೋದೆ. ಒಬ್ಬ ತಡೆದು "ಒಳಗೆ ಹೋಗಬೇಡ ಬೇಕಾದರೆ ಹೊರಗೆ ಕೂರು. ಇಲ್ಲಿ ಬ್ರಾಹ್ಮಣರಿಗಷ್ಟೆ ಪ್ರವೇಶವಿದೆ ಎಂದ. "ಹಾಗಂತ ಬೋರ್ಡು ಹಾಕಿ" ಅಂದೆ. ಅವರು ಒಪ್ಪಲಿಲ್ಲ. ಕ್ರಮೇಣ ನಾನು ಬಲವಂತದಿಂದಲೇ ಭಜನೆಗೆ ಹೋಗತೊಡಗಿದಂತೆ ಬಾಬಾ ಭಜನೆಯು ನಿಶ್ಶಬ್ಧವಾಯಿತು.

● ಜೀಬಿಯಾರ್., ರಾಮದುರ್ಗ

ದಲಿತ ಸಾಹಿತ್ಯ: ಒಂದು ಐತಿಹಾಸಿಕ ಹಿನ್ನೆಲೆ

ಮಹರಾಷ್ಟ್ರದ ದಲಿತ ಸಾಹಿತ್ಯ ಚಳುವಳಿಯು ಅದ್ವಿತೀಯವಾದು ದಾಗಿದೆ. ಯಾಕೆಂದರೆ ಬಹಳ ಹಿಂದಿನಿಂದಲೂ ದಲಿತರು ಮರಾಠಿಯಲ್ಲಿ ಸಾಹಿತ್ಯ ರಚಿಸುವರು ಎಂಬುದರಿಂದಷ್ಟೇ ಅಲ್ಲದೆ—ಬರೆಯುವವರ ಒಟ್ಟು ಪರಿಮಾಣದಲ್ಲಿ, ವೈವಿಧ್ಯದಲ್ಲಿ, ಅಭಿರುಚಿಯ ಆಯ್ಕೆಯಲ್ಲಿ, ಚಲನಾ ಶೀಲತೆಯಲ್ಲಿ, ಸಮಾಜದ ಜೊತೆಗೆ ನೇರ ಸಂಪರ್ಕ ಇಟ್ಟುಕೊಂಡಿರುವುದ ರಲ್ಲಿ-ಸಮಕಾಲೀನ ಸಂಪ್ರದಾಯಬದ್ಧ ಮರಾಠಿ ಸಾಹಿತ್ಯಕ್ಕಿಂತ ಭಿನ್ನವಾಗಿ ದಲಿತ ಸಾಹಿತ್ಯ ಒಂದು ಪಂಥವಾಗಿ ಬೆಳೆಯತೊಡಗಿತು. ದಲಿತ ಎಂದರೆ 'ಕೆಳಕ್ಕೆ ತಳ್ಳಿರುವ-ಕೆಳಕ್ಕೆ ತುಳಿಯಲಾಗಿರುವ' ಎಂಬ ಸಾಮಾಜಿಕ ನಡ ವಳಿಯ ಸತ್ಯದ ಅರಿವು. ಈ ಶತಮಾನದ ಆರಂಭದಲ್ಲಿ ಮಹರ್ ಜನಾಂಗ ದಿಂದ ಶುರುವಾದ ಈ ಸಾಹಿತ್ಯಿಕ ಚಳುವಳಿಯಲ್ಲಿ-ದಲಿತರಲ್ಲಿ ಬರೆಯುವ ಎಲ್ಲಾ ದಲಿತ ಸಾಹಿತಿಗಳೂ ಭಾಗಿಗಳಾಗಿಲ್ಲ ಎಂಬುದು ಗಮನಿಸಬಹುದಾದ ಸಂಗತಿ. ೧೯೨೦ ರಷ್ಟೊತ್ತಿಗೆ ಡಾ|| ಬಿ.ಆರ್. ಅಂಬೇಡ್ಕರ್ ಈ ಸಾಹಿತ್ಯಿಕ ಚಳುವಳಿಗೆ ಭದ್ರವಾದ ತಳಪಾಯ ಹಾಕಿದರು. ಬೌದ್ಧಧರ್ಮವನ್ನು ನಂಬಿ ಇವರು ಸಾಧಿಸಿದ ಸಾಧನೆಗಳನ್ನು ಅರಿತುಕೊಂಡ ಇವರ ಅನುಯಾಯಿಗಳ ಅದಕ್ಕೊಂದು ಆಕಾರವನ್ನು ಕೊಟ್ಟರು. ದಲಿತ ಸಾಹಿತ್ಯವನ್ನು ನಾವು ಐತಿ ಹಾಸಿಕವಾಗಿ ಅಭ್ಯಸಿಸುವಾಗ; ಮಹರ್ ಜನಾಂಗದ ಚಟುವಟಿಕೆಗಳು, ಬೌದ್ಧಧರ್ಮದ ಮೂಲಭೂತವಾದ ತಿರುಳು, ಅಂಬೇಡ್ಕರ್ ಅವರ ಗುರಿ.... ಮುಂತಾದ ನೇರವಲ್ಲದ ವಿಚಾರಗಳಕಡೆಗೂ ಗಮನ ಕೊಡಬೇಕಾಗುವುದು.

ಮೂಲ: **ಎಲಿಯನರ್ ಜಿಲಿಯಟ್.**

ಅನು: **ದೇವಯ್ಯ ಹರವೆ**

ಮರಾಠಿ ಮಾತಾಡುವ ಪಶ್ಚಿಮ ಹಿಂದೂಸ್ಥಾನದ ನೂರಕ್ಕೆ ತೊಂಬತ್ತು ಮಂದಿಯಷ್ಟು ಮಹರರು ಬೌದ್ಧಮತದವರೇ ಆಗಿರುವರು. ಸಂಪ್ರದಾಯ ದಂತೆ ಇವರೆಲ್ಲಾ ಹಳ್ಳಿಯ ಕೆಳದರ್ಜೆಯ ನೌಕರರಾಗಿ ದುಡಿಯುವರು. ಮಹರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ನೂರಕ್ಕೆ ಒಂಬತ್ತು ಮಂದಿಯಂತಿರುವ ಈ ಜನ, ರಾಜ್ಯದ ಪ್ರತಿಯೊಂದು ಊರಿನಲ್ಲೂ ಇದ್ದಾರೆ. ಇದು ಊರಿನ ತೀರಾ ಕೆಳದರ್ಜೆಯ ಕೆಲಸಗಳನ್ನು ಮಾಡುವುದಕ್ಕೆ ಇವರ ಆವಶ್ಯಕತೆ ಎಷ್ಟರ ಮಟ್ಟಿಗಿತ್ತು ಎಂಬುದನ್ನು ಸೂಚಿಸುವುದರ ಜೊತೆಗೆ; ಮೇಲಿನ ಜಾತಿಯ ವರು ಇವರನ್ನು ಯಾವರೀತಿ ಬಳಸಿಕೊಳ್ಳುವರು ಎಂಬುದನ್ನೂ ಸೂಚಿಸು ವುದು. ಗ್ರಾಮ ರಕ್ಷಣೆ ಮಾಡುವುದು, ಸತ್ತದನ ಹೊರುವುದು, ಬೇಹು ಗಾರಿಕೆ ಮಾಡುವುದು... ಮುಂತಾಗಿರುವ ಗ್ರಾಮದ ಆವಶ್ಯಕ ಕೆಲಸಗಳನ್ನು ಮಾಡುವುದು ಹಾಗೂ; ತಲೆ ತಲೆಮಾರುಗಳಿಂದ ಬಂದ ಹಾಡುಗಾರರು, ನೃತ್ಯಗಾರರು, ಹಾಸ್ಯಗಾರರು, 'ತಮಾಷ' ಜನಪದ ನಾಟಕಗಳ ಮದ್ದಳೆ ಬಡಿಯುವರು ಈ ಜನಾಂಗದಲ್ಲಿ ಇರುವರು. ದಲಿತ ಜನಾಂಗದ ಇತರ ಜಾತಿಗಳಾದ ಮಾದಿಗ ಮತ್ತು ಚಮ್ಮಾರರ ಜೊತೆಗೆ ಇವರೂ ಗುಡಿಯಲ್ಲಿ ಪ್ರವೇಶಿಸುವಾಗಿಲ್ಲ. ಇವರೆಲ್ಲರೂ ವಾಸಿಸುವ ಹಟ್ಟಿಗಳು ಊರಿಂದ ಹೊರಗಿವೆ. ೧೯ನೆಯ ಶತಮಾನಕ್ಕಿಂತ ಹಿಂದೆ ಗುರುತಿಸಬಹುದಾದ ಒಂದೇ ಒಂದು ದಲಿತ ಕವಿ ದನಿ ಎಂದರೆ ಚೋಖಮೇಳನದು. ಈತ ೧೪ನೆಯ ಶತಮಾನದಲ್ಲಿ ಬದುಕಿದ್ದ ಭಕ್ತಿಪಂಥದ ಒಬ್ಬ ಸಂತಕವಿ. ಈತ ಭಕ್ತಿಪಂಥದ ಇತರೇ ಕವಿ ಗಳ ಪ್ರೀತಿಗೆ ಪಾತ್ರನಾಗಿದ್ದನೇ ವಿನಃ ಸಾಂಪ್ರದಾಯಿಕವಾದ ಮಹರ್ ಜಾತಿ ಯೊಳಗೆ ತನ್ನ ಜನಾಂಗದ ಎಲ್ಲನೋವುಗಳನ್ನು ತಾನೂ ನುಂಗಿ ಬದುಕ ಬೇಕಿತ್ತು. ಇವನ ಊರಾದ ಮಂಗಳವಾಡೆಯ ಕೋಟೆ ಗೋಡೆಯನ್ನು ರಿಪೇರಿ ಮಾಡುವಾಗ ಅದುಕುಸಿದು ಸಾಯಬೇಕಾಯಿತು ಈ ಸಂತ ಕವಿ.

ಚೋಖಮೇಳನು ಈ ರೀತಿಯಾಗಿ ಬದುಕಿದವನಾದರೂ; ಇವನು ತನ್ನ ಕೀರ್ತನೆಗಳ ಮೂಲಕ ವಿಠಲನ ವೈಭವವನ್ನು ವರ್ಣಿಸುವ-ಆಧ್ಯಾತ್ಮಿಕ ಅರ್ಥವನ್ನು ಹೇಳುವುದರ ಕಡೆಗೇ ಹೆಚ್ಚು ಒಲವನ್ನು ತೋರಿಸಿರುವನು. ಹಾಗಿದ್ದರೂ ತನಗೊದಗಿದ ಅಸ್ಪೃಶ್ಯತೆಯ ವಿರೋಧವಾಗಿ ಈತ ತೋರಿಸಿದ ಕೆಲವೊಂದು ಪ್ರತಿಭಟನೆಗಳನ್ನು ಗುರುತಿಸಿಕೊಳ್ಳಬಹುದು. ಇವುಗಳಲ್ಲೆಲ್ಲಾ ಈತ ಸಾಮಾಜಿಕವಾಗಿ ತನಗೊದಗಿದ ಕೀಳರಿಮೆಯನ್ನು ಗುರುತಿಸಿಕೊಳ್ಳುವನು ಹಾಗೇ ಧಾರ್ಮಿಕ ಸಮಾನತೆ ರುವ ಸುಖವನ್ನು ಬಯಸುವನು. ಈ ಕೆಳಗಿನ ಪ್ರಸಿದ್ಧ ಕೀರ್ತನೆಯ ಗಮನಿಸಬಹುದು: ಕೀಳು ಕೊಳಕು-ಹೊಲೆ—ಮುಂತಾಗಿ ಹುಟ್ಟಿ ವ ಐಡಿಯಾಲಜಿಯ ವಿರುದ್ಧ ತೀವ್ರವಾಗಿ ಪ್ರತಿಭಟಿಸುವನು.

ಪಂಚಭೂತಗಳಲ್ಲೂ ಕೊಳಕೆಂಬುದೇ ತುಂಬಿದೆ.
ಇವುಗಳಿಂದಾದ ದೇಹವೊಂದೇ ಜಗದೊಳಗೆ
ಇಂತಿರಲು ಕೊಳಕರಾರು ಶುದ್ಧರಾರು?
ಕೊಳಕಿನ ಕಾರಣವೇ ದೇಹದ ಹುಟ್ಟಿನೊಳಗೆ.
ಹುಟ್ಟುವಾಗ
ಸಾಯುವಾಗ
ಕೊಳಕೆಂಬುದ ಬಿಟ್ಟು ಬೇರಿಲ್ಲ ಮತ್ತೆ.
ಯಾರಿಗೆ ಗೊತ್ತು ಯಾರು ಶುದ್ಧರಾಗುಟ್ಟಿದ್ದಾರೆಂದು?
ಚೋಖ ಕೇಳುವ, ಆಶ್ಚರ್ಯದಿಂದ
ಯಾರು ಶುದ್ಧರು?

ತಾನು ಹಿಂದಿನ ಜನ್ಮದಲ್ಲಿ ಮಾಡಿದ ಪಾಪವೇ ತಾನು ಈ ಜನ್ಮದಲ್ಲಿ ಕೀಳರಿಮೆಯನ್ನು ಅನುಭವಿಸುವಂತೆ ಮಾಡಿದೆ ಎಂದು ಮತ್ತೂ ಕೆಲವು ಕೀರ್ತನೆಗಳಲ್ಲಿ ಹಾಡುವನಾದರೂ; ಮೇಲಿನ ರೀತಿಯ ಪ್ರತಿಭಟನೆಯ ಅಂಶ ಗಳೂ ಕಂಡುಬರುವುವು. ಈತ ತನ್ನನ್ನು ತಾನು ಕಂಡುಕೊಂಡ ಈ ಪ್ರಪಂಚ ವನ್ನು ಅದರೂ ಒಪ್ಪಿಕೊಂಡಿರುವನು.

ಚೋಖಮೇಳನಿಗೂ ಮತ್ತು ಹೊಸ ಸಾಹಿತ್ಯಿಕ ಚಳುವಳಿಗೂ ಮಧ್ಯೆ ಐತಿಹಾಸಿಕ ಮತ್ತು ಪುರಾಣಕತೆಗಳ ಬರೆಯುವುದನ್ನು ಬಿಟ್ಟರೆ ಮತ್ತೇನೂ ಕಾಣಲು ಸಿಗವು. ಹೊಸ ಯುಗದ ಮೊದಲ ದಾಖಲೆಯೆಂದರೆ; ಧರ್ಮ ಗ್ರಂಥಗಳ ಮುಖೇನ ಹುಟ್ಟಿಸಿರುವ ಜಾತಿಯ ಪಟ್ಟಭದ್ರತೆಯನ್ನು ಕ್ರಮ ಬದ್ಧವಾಗಿ ಟೀಕಿಸುವುದು. ಅಲ್ಲದೆ ಕವನಗಳ ಮೂಲಕ ಕಟುವಾಗಿ ಪ್ರತಿಭಟಿ ಸುವುದು. ಈ ರೀತಿಯ ಪ್ರಾರಂಭದಲ್ಲಿ ಮುಖ್ಯರಾದವರು—ಮಹರ್ ಜನಾಂಗದ ಮಾಜಿ ಸೈನಿಕ ಗೋಪಾಲ್ ಬಾಬಾ ವೇಲಂಖರ್. ಇವರು ಒಂದು ಪತ್ರಿಕೆಯನ್ನು ಪ್ರಾರಂಭಿಸಿ ಅಸ್ಪೃಶ್ಯರನ್ನು ಇತರ ಹಿಂದೂಗಳು ನಡೆಸಿಕೊಳ್ಳುವ ರೀತಿಯನ್ನು ಕುರಿತು ಸಕ್ರಮವಾಗಿ ಖಂಡಿಸಿದರು. ಆಂಗ್ಲ ಸರ್ಕಾರವು ೧೮೯೦ರಷ್ಟೊತ್ತಿಗೆ ಸೈನ್ಯಕ್ಕೆ ದಲಿತರಿಂದ ಆಯ್ಕೆಮಾಡು ವುದನ್ನು ನಿಲ್ಲಿಸಿದ್ದರು. ಅದರ ವಿರುದ್ಧ ಪ್ರತಿಭಟಿಸಿ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಲು ವೇಲಂಖರ್ ಹೆಣಗಾಡಿದರೂ; ಅದರಿಂದ ದಲಿತ ಜನಾಂಗಕ್ಕೆ ಹೆಚ್ಚು ಉಪಯೋಗವಾಗುತ್ತದೆಂದು ತಿಳಿದಿದ್ದರೂ; ಸಾಕಷ್ಟು ಸಹಿಯನ್ನು ಸಂಗ್ರಹಿಸಲು ಸಾಧ್ಯವಾಗದಾಯಿತು. ಸಿ.ಬಿ. ಖೈರ್‌ರವರು ಬಾಂಬೆ ವಿಶ್ವವಿದ್ಯಾನಿಲಯಕ್ಕೆ ಸಂಗ್ರಹಿಸಿ ಕೊಟ್ಟಿರುವ 'ಅಂಬೇಡ್ಕರ್

ಸಂಗ್ರಹದಲ್ಲಿ' ಈಗಲೂ ವೇಲಂಕರ್ ಕೈಬರಹದ ಪ್ರತಿಯನ್ನು ಕಾಣಬಹುದಾಗಿದೆ. ಈ ಬೇಡಿಕೆಗೆ ಸಂಬಂಧಿಸಿದ ಬರಹದ ಜೊತೆಗೆ 'ಇಂದ್ರ ಸಭಾ' ಎಂಬ ಕವನವನ್ನು ವೇಲಂಕರ್ ಅವರೇ ಸೇರಿಸಿದ್ದರು. ಇದು ಲಯಬದ್ಧವಾಗಿ, ಛಂದೋಬದ್ಧವಾಗಿವೆಯಲ್ಲದೆ–ಗಮನಾರ್ಹವಾದ ಮರಾಠಿ ಮತ್ತು ಸಂಸ್ಕೃತದ ಮಿಶ್ರಣವಾದ ಭಾಷೆಯಲ್ಲಿ ಈ ಪದ್ಯವಿದೆ. ಹಿಂದೂ ಧರ್ಮ ಅಸ್ಪೃಶ್ಯರನ್ನು ಹ್ಯಾಗೆ ನಡೆಸಿಕೊಳ್ಳುತ್ತಿದೆ ಎಂಬುದನ್ನು ಇದು ವರ್ಣಿಸುತ್ತದಲ್ಲದೆ, ಮಹರರೊಳಗೇ ಕೆಲವು ಮಹರರು ತಮ್ಮ ಜನಾಂಗವನ್ನು ಶೋಷಿಸುವುದರ ವಿರೋಧ ಪ್ರತಿಭಟನೆಯಿದೆ. ಮತ್ತೊಬ್ಬ ಕವಿ ಪಂಡಿತ್ ಮೋಂಡಿರಾಮ್. ವೇಲಂಕರ್ ರೀತಿಯಲ್ಲೇ ಒಬ್ಬ ಪ್ರತಿಭಟನಾಕಾರರೂ ಆಗಿದ್ದರು.

ಪಂಡಿತ್ ಮೋಂಡಿರಾಮ್ ಅಸ್ಪೃಶ್ಯರ ನಡವಳಿಕೆಯ ಬಗ್ಗೆ ಮನು ಹೇಳುವ ಕಟ್ಟುಕಟ್ಟಳೆಗಳನ್ನು ವಿವರಿಸಿ, ಅವುಗಳನ್ನು ವಿಮರ್ಶಿಸುವರು. ಬಹಳ ಹಿಂದೆ ರೂಪಿತವಾಗಿರುವ ಈ ಕಟ್ಟು ಕಟ್ಟಳೆಗಳು ಆ ಕಾಲಕ್ಕೆ ಸುಧಾರಣೆಯನ್ನು ತರಬಲ್ಲವೆಂದು ನಂಬಲಾಗಿದ್ದು–ಇವುಗಳು ಹ್ಯಾಗೆ ತಲೆ ಬುಡ ಇಲ್ಲವಾದುವು ಎಂಬುದನ್ನು ತಿಳಿಸಿ ಅವುಗಳನ್ನು ಕಟುವಾಗಿ ಟೀಕಿಸುವರು. ಇಂಥ ಅರೆ ತಿಳುವಳಿಕೆಯನ್ನು ತುಂಬಿಕೊಂಡಿರುವ ಬ್ರಾಹ್ಮಣ ಪವಿತ್ರಗ್ರಂಥಗಳನ್ನು ಸುಡಲು ಕರೆಯಿಡುವರು. ಇವರು ತಮ್ಮ ಬರವಣಿಗೆಗೆ ಬಳಸುವ ಭಾಷೆ ಗಟ್ಟಿಮುಟ್ಟಾದುದು.

> ದಲಿತ ಹಸು ಎಮ್ಗೋಳ ಇಟ್ಗೋಲಾರ....
> ನಾಯಿ, ಕತ್ತೆ, ಇಲಿ–ಹೆಗ್ಗಣ ಇವ್ನಾಸ್ತಿ.
> ಹೆಂಗಸ್ನ ತಲೇಲ್ ಹೊತ್ಗೊಟ್ಟೋ ಹೇನ್ಗೋಳು...
> ಕೊಳ್ಕನಲ್ ಜಿಕ್ಲೇ ಆಡೋ ಐಕಳು...
> ಕೆದ್ರಿರೋ ಕೂದ್ಲು, ಮಣ್ ತುಂಬ್ಕಂಡಿರೋ ಬೆರಳ್ಳ ಉಗ್ರು
> ಪ್ರಾಣವಿಲ್ದ ಕಲ್ಲಿನ್ಗಂಗೆ ಮಂಕಿದ್ದಿರೋ ಕಣ್ಗೋಳು...
> ಅ ಆ ಇ ಈ ಗಿಳಿಪಾಠವ ಸಾದ್ಗೋಳು,
> ಅವರ ಕಿವಿಗಳ್ಗೆ ತುಂಬ್ತಾರೆ ಕೊಳ್ಕು....
> ಓ ವಂಚಕ್ರೇ! ಈ ರೀತ್ಯಾಗ ನೀವ್ ಹೊಟ್ಟೇ ತುಂಬ್ಕೊಳ್ಳೋದ್ರ
> ಬದ್ಲು ನೀವ್ ಮುಕ್ ತಿನ್ರಿ
> ತಲ್‌ತಲ್ಮಾರ್ನಿಂದ ನಾವ್ ಪಟ್ಟಿರೋ ಸಂಕ್ಟಾನೂ ನಿ ವ ನಮ್ಗೋಳ್ಗ
> ನೆನೆಸ್ಕೊಳ್ಳಿ.
> ನೀವ್ ಒಂದ್ಸಾರಿಯಾದ್ರು ಈ ಮನುಷ್ ಪ್ರಾಣಿ ಕಡ್ಗ ನೋಡ್ದ್ರ
> ಹೆಮ್ಮೆ ಆಗತ್ತೆ!
> ಭೂಸಾ ಶಾಸ್ತ್ರಗಳ್ನ ಸುಟ್ಟು ನಿಜ್ವಾದ ಸಂದೇಶ ಕೊಡ್ರಿ!
> ಇದು ಪಂಡ್ತ ಮೋಂಡೀ ರಾಮ್ನ ಸವಾಲು.

ಹೀಗೆ ಪಂಡಿತ್ ಮೊಂಡಿರಾಮು ಮತ್ತು ವೇಲಂಕರ್‌ರ ರೀತಿಯೊಳಗೆ ಪ್ರತಿಭಟನೆ ಮಾಡುವ ಅರಿವು ಅದೆಷ್ಟು ಜನಕ್ಕಿತ್ತೋ ತಿಳಿಯಲು ಬರುವುದಿಲ್ಲ. ಅಂತೂ ಈ ತಲೆಮಾರಿನ ಮುಖಂಡರೆಲ್ಲಾ ಊರುಗಳ ಬಿಟ್ಟು ಮಿಲ್ಲಿನಲ್ಲಿ ಕೆಲಸಮಾಡಲು, ರಸ್ತೆಕೆಲಸ ಮಾಡಲು, ಹಡಗು ಕಟ್ಟೋ ಕೆಲಸ ಮಾಡಲು ಬೇರೆ ಬೇರೆ ಕಡೆಗೆ ಹೋದರು. ಹೋದ ಹೋದ ಕಡೆಗಳಲ್ಲಿ ತಮ್ಮ ಪಂಥವ ಬಲಪಡಿಸಿದರು. ಜನ ಜಾಗೃತಿ ಮಾಡಿದರು. ಈ ರೀತಿಯಲ್ಲಿ 20 ನೇ ಶತಮಾನದ ಮೊದಲ ಭಾಗದಲ್ಲಿ ಮುಖ್ಯವಾಗಿ ಶ್ರಮಿಸಿದ ಇಬ್ಬರನ್ನು ನೆನೆಯಬಹುದು. ಒಬ್ಬ: ನಾಗಪುರದ ಮಿಲ್ಲೊಂದರಲ್ಲಿ ಕೆಲಸ ಮಾಡುತ್ತಿದ್ದ ಕಿಸಾನ್ ಫಾಗೋ ಬಾನ್ಸೋಡೆ, ಮತ್ತೊಬ್ಬ: ಪೂನಾದ ಹೋಟೆಲೊಂದರ ಮಾಣಿಯಾದ ಶಿವರಾಂ ಜಂಬಾ ಕಂಬ್ಳೇ. ಇವರಿಬ್ಬರೂ ವಿದ್ಯಾವಂತರಿದ್ದು, ಬುದ್ಧಿವಂತರಿದ್ದು. ಒಂದೇ ಭಾಷೆಯಾದ ಮರಾಠಿಯಲ್ಲಿ ಬರೆಯುವವರಾಗಿದ್ದರು. ತಮಗಿಂತ ಹಿಂದೆ ಮತ್ತು ತಮ್ಮ ಕಾಲದಲ್ಲೂ ಉತ್ತಮ ಜಾತಿಯವರು ಅಸ್ಪೃಶ್ಯರಿಗೆ ಮಾಡಿದ–ಮಾಡುತ್ತಿರುವ ವಂಚನೆಯನ್ನು; ಆಧುನಿಕ ಸಲಕರಣೆಗಳಾದ (ಈ ಕಾಲಕ್ಕೆ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಇವರ ಹಿಡಿತದಲ್ಲಿದ್ದ) ಪತ್ರಿಕೆಗಳಲ್ಲಿ; ಸಭೆಗಳಲ್ಲಿ; ಮನವಿಗಳನ್ನು ಸಲ್ಲಿಸುವುದರಲ್ಲಿ; ವಿದ್ಯಾಸಂಸ್ಥೆ.... ಇವುಗಳ ಮುಖೇನ ಬಯಲಿಗೆಳೆದರು. ಇವರಿಬ್ಬರೂ ಸಾಹಿತ್ಯದ ಮೂಲಕವೇ ತಮ್ಮ ಪ್ರತಿಭಟನೆಯನ್ನು ಸೂಚಿಸಿದರು. ಕಂಬ್ಳೇ ತನ್ನ ಜೀವನ ಚರಿತ್ರೆ ಬರೆದರೆ, ಬಾನ್ಸೋಡೆ ವಿವಾದಾಸ್ಪದ ಗದ್ಯ ರಚಿಸುವುದರ ಬದಲು ಪದ್ಯಗಳನ್ನು ಬರೆದರು. ಇಷ್ಟಾದರೂ ಬಾನ್ಸೋಡೆ ಹಿಂದೂ ತತ್ವಗಳನ್ನು ಒಪ್ಪಿಕೊಳ್ಳುವರು. ೧೯೩೦ರ ದಶಕದ ರಷ್ಟೊತ್ತಿಗೆ ಡಾ|| ಅಂಬೇಡ್ಕರ್ ಹಿಂದೂ ಧರ್ಮದ ಬಗ್ಗೆ ತಾಳಿದ ನಿಲುವನ್ನು ಪ್ರತಿಭಟಿಸುವರು.

> ನೋಡಿ, ನೋಡಿ ಎಲ್ಲ ಜನಗಳೇ. ಇದು ನನ್ನ ಹಿಂದೂ ದೇಶ.
> 'ತನ್ನ ಬೇರಿನೊಳಗೇ ಕವಲೊಡೆದ,
> ಅರಣ್ಯದ ಶಾಖೋಪ ಶಾಖೆಯ,
> ಶತ್ರುಗಳ್ನೂ ಗೌರವಿಸೋ – ಇದು ನನ್ನ ಹಿಂದೂ ದೇಶ.
> ಜಗತ್ತಿನ ಬೇರೆಲ್ಲೂ ಕಾಣದ
> ಹೊಂದಾಣಿಕೆ ಕಾಣುವಿರಿಲ್ಲಿ,
> ಜಾತಿ ಹುಟ್ಟಿನಲ್ಲಿದೆ. ಇದು ನನ್ನ ಹಿಂದೂ ದೇಶ.
> ಮೊದಲಲ್ಲಿ ಬ್ರಾಹ್ಮಣ
> ಮಿಕ್ಕವರೆಲ್ಲಾ ಕೆಳಗೆ
> ಧರ್ಮದೊಳಗೇ ಇರೋ ತಿರುಳಿದು.

ಮತ್ತೊಂದು ಪದ್ಯದಲ್ಲಿ ಚೋಖಮೇಲನನ್ನು – ಧರ್ಮದಲ್ಲಿ ನಾವು ಹೊಸ ದೃಷ್ಟಿಯನ್ನು ಪಡೆದುಕೊಳ್ಳುವಂಥ ಸ್ಫೂರ್ತಿಯನ್ನು ಕೊಡು ಎನ್ನುವನು.

> ನೀ ಯಾಕೆ ಅನುಭವಿಸುವೀ ಪಾಪವ?
> ಚೋಖ ಗುಡಿಯೊಳಗೆ ನೇರಾಗಿ ಹೋದ.
> ಇದರಿಂದ ದೂರಾಗಿ ನೀ ಯಾಕೆ ಅವಮಾನಿತನಾದೆ?
> ಚೋಖನ ವಂಶಜನು ನೀನು.
> ನೀ ಯಾಕೆ ಅಂಜುತ್ತೀ ಗುಡಿಯೊಳಗೆ ನುಗ್ಗಲು?
> ಬಾ, ನಿಂತ ಸೈನಿಕನ ನಿಲವನ್ನು ತಕ್ಕೋ.
> ಹೊಲೆತನವ ವಿರುದ್ಧ ಒಟ್ಟಾಗಿ ಸಿಡಿಯುವಾ.

ಬಾನ್ಸೋಡೆ ಮತ್ತು ಕಂಬ್ಳೆ ನಂತರದ ಇಪ್ಪತ್ತು ವರ್ಷಗಳಲ್ಲಿ; ಕೆಲವು ಮುಖಂಡರು ಒಂದಕ್ಕೊಂದು ದೂರವಾದ ನಾಗಪುರ ಮತ್ತು ಪೂನಾಗಳಲ್ಲಿ, ಬಾಂಬೆಯ ಅಮರಾವತಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಾಗೇ ತಮ್ಮ ಜನಜಾಗೃತಿಯ ಕೆಲಸವನ್ನು ಮುಂದುವರಿಸುತ್ತಿದ್ದರು. ಈ ರೀತಿಯಲ್ಲಿ ಚದುರಿದ್ದ ಸಂಘ ಸಂಸ್ಥೆಗಳನ್ನು ಒಟ್ಟುಗೂಡಿಸಿ – ಇವುಗಳ ಚಟುವಟಿಕೆಯನ್ನು ವಿಸ್ತರಿಸಲು ಹಾಗೂ ಸರಿಯಾದ ಮಾರ್ಗದರ್ಶನ ತೋರಿಸಲು ಒಬ್ಬ ನೇತಾರನ ಅವಶ್ಯಕತೆಯಿತ್ತು. ಇಂಥಾ ದಿನಗಳಲ್ಲೇ ಡಾ|| ಬಿ. ಆರ್. ಅಂಬೇಡ್ಕರ್ ಬೆಳಕಿಗೆ ಬಂದರು.

ಡಾ|| ಬಿ. ಆರ್. ಅಂಬೇಡ್ಕರ್ ವೇಲಂಕರ್ ಹತ್ತಿರದ ಸಂಬಂಧಿಯಾಗಿದ್ದು; ಅದೇ ರೀತಿಯಲ್ಲಿ ಸೇನೆಯ ಹಿನ್ನೆಲೆಯನ್ನು ಹೊಂದಿದ್ದರು. ಸೇನೆಯ ಹಿನ್ನೆಲೆಯು; ಮಹರ್ ಜನಾಂಗದ ಸಂಪ್ರದಾಯಬದ್ಧ ಸಮಾಜದ ಚೌಕಟ್ಟಿನೊಳಗೇ ಅನೇಕ ಸ್ವತಂತ್ರ ಪ್ರವೃತ್ತಿಯ ವ್ಯಕ್ತಿಗಳನ್ನು ರೂಪಿಸುವುದರಲ್ಲಿ ಸಹಕಾರಿಯಾಗಿದೆ. ಮರಾಠ ರಾಣಿಯ ಸಹಾಯದಿಂದ ಇವರು ಓದಿ: ಬಾಂಬೆಯ ಎಲ್ಫಿನ್‌ಸ್ಟೋನ್ ಕಾಲೇಜಿನ ಬಿ. ಎ. ಪದವಿ ಪಡೆದರು. ಮಹರ್ ಜನಾಂಗದಲ್ಲಿ ಮೊಟ್ಟಮೊದಲ ಬಾರಿಗೆ ಕಾಲೇಜು ಶಿಕ್ಷಣ ಪಡೆದರಲ್ಲದೆ; ಹೊರದೇಶದ ವಿಶ್ವವಿದ್ಯಾಲಯಗಳಿಂದ ಪಿ. ಎಚ್.ಡಿ., ಡಿ. ಎಸ್‌ಸಿ., ಬಾರ್-ಅಟ್

ಲಾ–ಪದವಿಗಳನ್ನೂ ಪಡೆದರು. ಇವರು–ಹೊಸ ಹೊಸ ಆಸೆಯನ್ನು ಹೊತ್ತ ಹೊಸ ಮಹರ್ ಜನಾಂಗವನ್ನು ಪ್ರತಿನಿಧಿಸುವಂತಾದರಲ್ಲದೆ; ತಮ್ಮ ಜನಾಂಗದ ಜೊತೆಯಲ್ಲೇ ತಮ್ಮನ್ನೂ ಗುರುತಿಸಿಕೊಂಡರು. ಇವರು ಆಂಗ್ಲ ಸರ್ಕಾರದ ಹೊಸ ರಾಜಕೀಯ ಮತ್ತು ವಿದ್ಯಾಭ್ಯಾಸದ ಚೌಕಟ್ಟಿನೊಳಗೇ ಕೆಲಸ ಮಾಡಲು ಸ್ಪರ್ಧಿಸಿದ ರೀತಿಯು ವಿಶಿಷ್ಟವಾದುದು.


ಅಂಬೇಡ್ಕರ್ ಬರವಣಿಗೆ ಮೂಲಭೂತವಾಗಿ ರಾಜಕೀಯಕ್ಕೆ ಸಂಬಂಧಿಸಿದರೂ, ಇಲ್ಲಿಯ ಸಂಘಟನೆಯ ಶಕ್ತಿ ಮತ್ತು ಪ್ರೇರಣೆಯೇ ಹೊಸಕಾವ್ಯದ ಹುಟ್ಟಿಗೆ ಕಾರಣವಾಯಿತು. ೧೯೨೦ರ ನಂತರ ವೃತ್ತಪತ್ರಿಕೆ ನಡೆಸತೊಡಗಿದರು. ಹಣ ಕೈ ಬಿಡಲು ಶುರುವಾದಾಗ ನಡೆಸುವುದನ್ನು ನಿಲ್ಲಿಸುವುದು, ಸಾರ್ವಜನಿಕ ನಿಧಿಯು ಸಂಗ್ರಹವಾದಾಗ ಪತ್ರಿಕೆ ನಡೆಸುತ್ತಿದ್ದರು. ಈ ಪತ್ರಿಕೆಗಳ ಮೂಲಕ ಜನಗಳಜೊತೆ ಸಂಪರ್ಕ ಮಾಡುವುದಷ್ಟೇ ಆಗಿರದೆ–ಸುಮಾರು ನೂರಕ್ಕೆ ಮೂರುಜನ ವಿದ್ಯಾವಂತರಿದ್ದ ಮಹರ್ ಜನಾಂಗದೊಳಗೆ ಕೆಲವು ವಿಷಯಗಳನ್ನು ಬಿತ್ತುವುದು, ಇವುಗಳೆಲ್ಲಾ ಸಾಧನೆಯ ಒಂದು ರೀತಿಯ ಸಂಕೇತಗಳೂ ಆಗಿದ್ದವು. ೧೯೬೨ರಲ್ಲಿ ರಾಣಪೈಸ್ ಎಂಬುವರು ಇಡೀ ಹಿಂದೂಸ್ಥಾನದಲ್ಲಿ ದಲಿತರಿಂದ ಪ್ರಾರಂಭವಾದ ಪತ್ರಿಕೆಗಳ ಒಂದು ಪಟ್ಟಿಯನ್ನು ಕೊಟ್ಟಿರುವರು. ಇದರ ಪ್ರಕಾರವಾಗಿ ಒಟ್ಟು ೧೨೦ ಪತ್ರಿಕೆಗಳು ದಲಿತರಿಂದ ಶುರುವಾಗಿದ್ದು ಇದರಲ್ಲಿ ಬಹುಭಾಗ ಮರಾಠಿ ಪತ್ರಿಕೆಗಳಾಗಿವೆ.

ಅಂಬೇಡ್ಕರ್ ಮುಂದಾಳುತನದಲ್ಲಿ ಶುರುವಾದ ಚಳುವಳಿಯು ವಿದ್ಯಾಭ್ಯಾಸದ ಪ್ರಾಮುಖ್ಯತೆಯನ್ನು ಕಂಡುಕೊಂಡು ಅದರ ಕಡೆಗೆ ಹೆಚ್ಚು ನಿಗಾವಹಿಸಿತು. ಚಳುವಳಿಯಲ್ಲಿ ವಿದ್ಯಾರ್ಥಿಗಳೂ ಮಾಸ್ತರರೂ ಹೆಚ್ಚು ಭಾಗಿಗಳಾದರು. ಈ ಚಳುವಳಿಯಿಂದಾಗಿ ಹಾಸ್ಟಲುಗಳನ್ನು ತೆರೆಯಲಾಯಿತು. 'ಹಿಂದುಳಿದ ವರ್ಗಗಳಿಗೆ ಧನಸಹಾಯವನ್ನು ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಂಡರಲ್ಲದೆ ಈ ಸಂಘವೇ ಕೆಲವು ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿತು. ಅಂಬೇಡ್ಕರ್ ಜನಾಂಗದ ವಿದ್ಯಾಸಂಸ್ಥೆಗಳು– ಬೌದ್ಧರ ಮತ್ತೂ ಕೆಲವು ಗುಂಪುಗಳು ಸೇರಿ ಸುಮಾರು ಹತ್ತು ಕಾಲೇಜುಗಳನ್ನು ನಡೆಸುವುದರ ಮುಖೇನ; ಜನಗಳನ್ನು ವಿದ್ಯಾವಂತರನ್ನಾಗಿ ಮಾಡುವುದು, ಜೊತೆಗೆ ಸಾಹಿತ್ಯಕ ಚರ್ಚೆಗಳನ್ನು ಏರ್ಪಡಿಸಿ ಜನ ಜಾಗೃತಿಯನ್ನುಂಟುಮಾಡುವುದು, ಹೆಚ್ಚು ಓದಿದವರಿಗೆ ಕೆಲಸಕೊಡುವ....ಮುಂತಾದ ಅನೇಕ ಉದ್ದೇಶಗಳನ್ನು ತುಂಬಿಕೊಂಡರು. ಹೀಗಾಗಿ ೧೯೬೦ರಷ್ಟೊತ್ತಿಗೆ ಔರಂಗಾಬಾದಿನ ಮಿಲಿಂದ್ ಕಾಲೇಜಿನ ಮರಾಠಿ ಪ್ರಾಧ್ಯಾಪಕ ಗಂಗಾಧರ್ ಪಟವಾನೆಯವರಿಂದ ಶುರುವಾದ ದಲಿತ ಸಾಹಿತ್ಯ 'ಅಸ್ಮಿತಾದರ್ಶ' ಆಕಸ್ಮಿಕವಲ್ಲ.

ಈ ಚಳವಳಿಯ ಮೂಲವಾದ ಅಂಬೇಡ್ಕರ್ ರಾಜಕೀಯ ಕ್ಷೇತ್ರವನ್ನು ವಿವರಿಸುವುದು ಕಷ್ಟತರವಾದುದು. ಸದ್ಯಕ್ಕೆ ತೃಪ್ತಿಯಾಗುವಂಥ ಎರಡು ಅಂಶಗಳನ್ನು ಮಾತ್ರ ಇಲ್ಲಿ ನಾವು ಗಮನಿಸಬಹುದು. ಮೊದಲನೆಯದಾಗಿ ಇವರ ಅನುಯಾಯಿಗಳು ಹಳ್ಳಿ ಮಟ್ಟದ ರಾಜಕಾರಣಿಗಳಾಗಿ ಇಳಿದದ್ದು. ಎರಡನೆಯದಾಗಿ: ಅಂಬೇಡ್ಕರ್ ಪಕ್ಷದ ರಾಜಕೀಯ ಗುಂಪುಗಳು ಯಾವಾಗಲೂ ಕಾಂಗ್ರೆಸ್ಸಿನಿಂದ ಹೊರಗುಳಿದದ್ದು. ಈ ಕಾರಣಗಳಿಂದ ಈ ಸಂಘ ಭದ್ರವಾದ ಯಾವೊಂದೂ ಸರ್ಕಾರಕ್ಕೆ ಸಂಬಂಧಿಸಿದ ಶಕ್ತಿಯನ್ನು ಶಾಶ್ವತವಾಗಿ ಕಾಯ್ದುಕೊಂಡು ಬರಲಿಲ್ಲ–ಹಾಗಾಗಿ ಉದ್ದಕ್ಕೂ ಸಾಮಾಜಿಕವಾಗಿ, ರಾಜಕೀಯವಾಗಿ ಹೆಣಗಾಡುವ ಪರಿಸ್ಥಿತಿ ಉಂಟಾಯಿತು. ಈಗಲೂ ಬಹುತೇಕ ಕವಿಗಳು ರಾಜಕೀಯದಿಂದ ದೂರವಿರುವುದ ನಾವು ಕಾಣಬಹುದು. ಆದರೆ ೧೯೭೨ರಷ್ಟೊತ್ತಿಗೆ ತಲೆ ಎತ್ತಿದ 'ದಲಿತಸಂಘ' ರಾಜಕೀಯದೊಂದಿಗೆ ಬಹಳವಾಗಿ ನಿಕಟ ಸಂಪರ್ಕವಿಟ್ಟುಕೊಂಡಿತ್ತು. ಈ ದಲಿತ ಸಂಘದ ಬರಹಗಾರರು; ಹಳ್ಳಿಗಳಲ್ಲಿ ಸವರ್ಣೀಯರು ದಲಿತರಿಗೆ ಕೊಡುವ ಹಿಂಸೆಯನ್ನು; ರಿಪಬ್ಲಿಕನ್ ಪಕ್ಷದಲ್ಲಿ ಇರಬಹುದಾದ ದೋಷಗಳನ್ನೂ—ಏಕಕಾಲದಲ್ಲಿ ಪ್ರತಿಭಟಿಸಿದರು. ದಲಿತಸಂಘ ಈಗ ಎರಡುಗುಂಪಾಗಿದೆ. ಇಂಡಿಯಾದ ಕಮ್ಯುನಿಷ್ಟ ಪಕ್ಷದೊಂದಿಗೆ ಒಂದಾಗಿರುವ ನಾಮದೇವ ಧಸಾಳೆಯ ಮುಂದಾಳು ತನದಲ್ಲಿ ಒಂದೂ; ಅಂಬೇಡ್ಕರ್ ತತ್ವಗಳನ್ನು ಬಿಟ್ಟು ಇಂಡಿಯಾದ ಮಿಕ್ಕೆಲ ರಾಜಕೀಯ ಪಕ್ಷಗಳ ನಿಂದಿಸುವ ರಾಜಾಧಾಳೆಯ ಮುಂದಾಳುತನದಲ್ಲಿ ಮತ್ತೊಂದು. ೧೯೭೨ ಮತ್ತು ೭೩ರಲ್ಲಿ ಈ ದಲಿತಸಂಘ ಇಟ್ಟುಕೊಂಡಿದ್ದ ಉದ್ದೇಶಗಳು ಮತ್ತು ನಡೆಸುತ್ತಿದ್ದ ಚಟುವಟಿಕೆಗಳು ಈಗ ಇಳಿಯುತ್ತಿವೆ. ಆದರೂ ಧಸಾಳೆ ಮತ್ತು ರಾಜಾಧಾಳೆ ಇಬ್ಬರೂ ಸಾಹಿತಿಗಳಾಗಿರುವುದರಿಂದ, ಹಾಗೂ ಸಾಹಿತ್ಯ ಸಮಾಜದ ಅಸಮಾನತೆಯನ್ನು ತೊಡೆಯಲು ಒಂದು ಆಯುಧ ಎಂಬುದನ್ನು ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕು.

ಅಂಬೇಡ್ಕರ್ ಹಿಂದೂಧರ್ಮದ ತತ್ವಗಳನ್ನು ಬಹಳ ಭಿನ್ನವಾಗಿ ವಿವರಿಸಿದರು. ಅದರ ನಿಜಸ್ವರೂಪ ಏನೆಂಬುದನ್ನು ತಿಳಿಯಪಡಿಸಿದರು. ಇವರ ಧರ್ಮದ ಬಗೆಗಿನ ಈ ರೀತಿಯಾದ ಐಡಿಯಾಲಜಿಯು ಬಹುಶಃ ದಲಿತ ಪಂಥದಲ್ಲಿ ಬರೆಯುವ ಎಲ್ಲಾ ಸಾಹಿತಿಗಳಿಗೂ ಮೂಲ ಪ್ರೇರಣೆಯಾಯಿತು. ಆಧುನಿಕತೆಯ ಎಲ್ಲಾ ಮಹತ್ವದ ಪರಿಕರಗಳ ಸಂಕೇತ ವೃತ್ತ ಪತ್ರಿಕೆ. ಅಂದರೆ ವಿದ್ಯಾಸಂಸ್ಥೆಗಳು ಕೆಲವೊಂದು ಅವಕಾಶಗಳಿಗೆ ಮಾರ್ಗವಾದರೆ, ಸರ್ಕಾರದಲ್ಲಿ ಭಾಗಿಗಳಾಗಲು ಮತ್ತು ಒಗ್ಗಟ್ಟನ್ನು ಕಾಯ್ದುಕೊಳ್ಳುವುದಕ್ಕೆ ಮೂಲಭೂತವಾಗಿ ಅತೀ ತುರ್ತಾದ ರಾಜಕೀಯ ಒತ್ತಡಗಳು ಕಾರಣವಾಗುವುದಾದರೆ, ಮನಸ್ಸಿನ ಸ್ವಾತಂತ್ರ್ಯಕ್ಕೆ ಬೌದ್ಧಧರ್ಮವೇ ಶ್ರೇಷ್ಠವಾದುದು. ಇದನ್ನು ನೋಡಿದರೆ ಬಹಳ ಹಿಂದೆಯೇ ವೇಲಂಬ್ಕರ್ ಇಡೀ ಸಾಂಪ್ರದಾಯಿಕ ಕಾವ್ಯಗಳನ್ನು ಸುಟ್ಟುಹಾಕಿ ಎಂದು ಹೇಳಿದ್ದರ ಸತ್ಯ ತಿಳಿಯುತ್ತದೆ. ೧೯೫೬ ರಲ್ಲಿ ಅಂಬೇಡ್ಕರ್ ಮುಂದಾಳುತನದಲ್ಲಿ ಬೌದ್ಧಮತಕ್ಕೆ ಅಸ್ಪೃಶ್ಯರು ವರ್ಗಾವಣೆಯಾದ ಸಂಗತಿಯು ಇವತ್ತು ಐತಿಹಾಸಿಕ ದಾಖಲೆಯಾಗಿರುವುದು. ಈ ರೀತಿಯ ವರ್ಗಾವಣೆಯ ಮೂಲಕ ಅಸ್ಪೃಶ್ಯತೆಯನ್ನು ತಿರಸ್ಕರಿಸುವುದಷ್ಟೇ ಅಲ್ಲದೆ; ಈ ದೇಶದ ಧರ್ಮದೊಳಗೆ ಆಳವಾಗಿ ಬೇರು ಬಿಟ್ಟುಕೊಂಡಿರುವ; ದೇವರು, ನಂಬಿಕೆಗಳು, ಪುರಾಣಗಳು, ಜಾತೀಯತೆ, ... ಮುಂತಾದ ಎಲ್ಲಾ ಕೋಕನ್ನೂ ದೂರೀಕರಿಸಿದರು. ಈ ಘಟನೆಯು ತೀರಾ ಕ್ರಾಂತಿದಾಯಕವಾದ, ನ್ಯಾಯಸಮ್ಮತವಾದ, ಮಾನವೀಯತೆಯಿಂದ ಯೋಚಿಸಬೇಕಾದ ಸಂಗತಿಯಾಗಿದೆ. ಈ ರೀತಿಯ ಸಾಧನೆಯಿಂದಾಗಿ ದಲಿತರು ಸಾರ್ವಜನಿಕ ಗುಡಿಯೊಳಗೆ ಪ್ರವೇಶಿಸುವಂತಾಯಿತು. ಆದರೇನು ದಲಿತರಿಗೆ ಇವರಿಂದಾದ ಲಾಭ ಸೊನ್ನೆ. ಸ್ವಾತಂತ್ರ್ಯಾನಂತರದ ಭಾರತದ ಹೊಸ ಸಂವಿಧಾನ ರೂಪಿಸಲು ನೇಮಿಸಿದ ಕಮಿಟಿಯಲ್ಲಿ ಅಂಬೇಡ್ಕರ್ ಇದ್ದರಲ್ಲದೆ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡುವಂಥ ಕಾಯಿದೆಯನ್ನು ನಿಯಮಿಸಬೇಕೆಂದು ಸಲಹೆಯಿತ್ತರು– ಸೇರಿಸಿಯೂ ಆಯಿತು; ಆದರೆ ಸ್ಪರಿಂದ ಗತಾನುಗತವಾಗಿ ಬಂದಿರುವ ಹಿಂದೂ ಪುರೋಹಿತಶಾಹಿಯನ್ನು ಉರುಳಿಸಲಾಗಲಿಲ್ಲ. ಗಂಗಾಧರ ಪಠವಾಣೆ ಒಂದು ಸಾರಿ ಹೀಗೆ ಬರೆಯುವರು: "ನನಗೆ ದಲಿತ ಎನ್ನುವುದು ಒಂದು ಜಾತಿ ಅಷ್ಟೇ ಅಲ್ಲ. ಈ ದೇಶದ ಸಂಪ್ರದಾಯದ ಚೌಕಟ್ಟಿನಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಿಸಲಾಗಿರುವವನು. ಇವನಿಗೆ ಈ ದೇಶದ ರಕ್ತದಲ್ಲಿ ತುಂಬಿಕೊಂಡಿರುವ ದೇವರು, ಧರ್ಮ, ಪುನರ್ಜನ್ಮ, ಪವಿತ್ರಗ್ರಂಥಗಳು, ಸ್ವರ್ಗ–ನರಕ ... ಮುಂತಾದವುಗಳಲ್ಲಿ ನಂಬಿಕೆಯಿಲ್ಲ. ಯಾಕೆಂದರೆ; ಅವುಗಳೆಲ್ಲಾ ಇವನನ್ನು ಗುಲಾಮನನ್ನಾಗಿ ಮಾಡಿರುವಂಥವು. ಮಾನವೀಯತೆಯಲ್ಲಿ ಇವನಿಗೆ ನಂಬಿಕೆಯಿದೆ. ಬದಲಾವಣೆಯ ಮತ್ತು ಕ್ರಾಂತಿಯ ನಿಜವಾದ ಸಂಕೇತವೇ ಈವತ್ತಿನ ದಲಿತ". ೧೯೫೬ರ ಘಟನೆಯ ನಂತರವೇ ನಿಜವಾದ ದಲಿತ ಸಾಹಿತ್ಯ ಎಂದು ಮರಾಠಿಯ ಪ್ರಮುಖ ದಲಿತ ಕತೆಗಾರ ಬಾಬುರಾವ್ ಬಾಗುಲ್ ಹೇಳುವರು. ಯಾವ ಹಿಂದೂ ಸಂಪ್ರದಾಯ ಅಸ್ಪೃಶ್ಯತೆಯ ಅಸ್ತಿತ್ವವನ್ನು ಧರ್ಮಸಮ್ಮತವಾಗಿ ವಾದಿಸುತ್ತದೆಯೋ

[17ನೇ ಪುಟನೋಡಿ]




ನಟ ನಿರ್ದೇಶಕ ಸಿ. ಆರ್. ದಾಸ್

ಚಿಕ್ಕಂದಿನಿಂದಲೂ ನಾಟಕ ಸಿನೆಮಾಗಳಲ್ಲಿ ಗೀಳು ಬೆಳೆಸಿಕೊಂಡಿರುವ ಮೈಸೂರಿನ ಗಾಂಧಿನಗರದಲ್ಲಿರುವ ಸಿ. ಆರ್. ದಾಸ್ ಈಗ ಮೈಸೂರು ಟೌನ್‌ಹಾಲಿನಲ್ಲಿ ನಡೆಯುವ ಎಲ್ಲ ತರದ ನಾಟಕಗಳಲ್ಲೂ ಒಂದಲ್ಲ ಒಂದು ಪಾತ್ರದಲ್ಲಿ ಕಾಣಿಸಿಕೊಂಡೇ ಬಂದಿದ್ದಾರೆ. ದಲಿತ ಸ್ನೇಹಿತರನ್ನೇ ಕೂಡಿಸಿ ಮೀರಿದ ಮಡದಿ, ತ್ಯಾಗಿ, ಸದಾರಮೆಗಳಂತ ನಾಟಕಗಳನ್ನು ಸ್ವತಃ ನಿರ್ದೇಶಿಸಿ ಪ್ರದರ್ಶಿಸಿರುವ ಇವರು ಒಳ್ಳೆಯ ನಟ ಮತ್ತು ನಿರ್ದೇಶಕ ಕೂಡ. " ನನಗೆ ಸಮಾಜ ತಿದ್ದುವ ನಾಟಕಗಳೆಂದರೆ ಇಷ್ಟ " ಎನ್ನುವ ದಾಸ್ ಸಿನೆಮಾಗಳಲ್ಲೂ ಅವಕಾಶಗಳಿಗಾಗಿ ಆಸೆ ತುಂಬಿಕೊಂಡವರು. ಒಂದೇ ರೂಪ ಎರಡು ಗುಣ, ಹುಡುಗಾಟದ ಹುಡುಗಿ, ಕಾಲೇಜು ರಂಗ, ನಮಸ್ಕಾರ, ಶನಿಪ್ರಭಾವ ಇತ್ಯಾದಿ ಸಿನೆಮಾಗಳಲ್ಲಿ ಸಣ್ಣ ಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಇವರಿಗೆ "ಅರ್ಹತೆಗೆ ತಕ್ಕ ಪಾತ್ರ ಸಿಕ್ಕಿಯೇ ಇಲ್ಲ. ಇದಕ್ಕೆ ಕಾರಣ ಜಾತಿಯೋ ಹಣವೊ ನನಗೆ ಅರ್ಥವಾಗಿಲ್ಲ" ಎನ್ನುವ ದಾಸ್ ದಲಿತರಲ್ಲಿರುವ ನಿಜವಾದ ಟೇಲೆಂಟ್ ತೋರಿಸುವಂತ ನಾಟಕ ಸಿನೇಮಾ ಮಾಡುವ ಕನಸು ಕಾಣುತ್ತಿದ್ದಾರೆ.

ಗಾಯಕ ಶಿವಶಂಕರ್

ಜನಪದ ಗೀತೆ ಮತ್ತು ಕ್ರಾಂತಿ ಗೀತೆಗಳನ್ನು ಕೇಳುವವರ ಹೃದಯ ಮೀಟುವಂತೆ ಹಾಡುವ ಎನ್.ಎಲ್. ಶಿವಶಂಕರ್ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿ. ಎಳೆ ವಯಸ್ಸಿನಲ್ಲಿಯೇ ಸಮಾಜದ ಬಗ್ಗೆ ಕ್ರಾಂತಿಕಾರೀ ತಿಳುವಳಿಕೆ ರೂಢಿಸಿಕೊಳ್ಳುತ್ತಿರುವ ಶಿವಶಂಕರ್ ನೋವಿಲ್ಲದ ಗೋಳಿಲ್ಲದ ಸಮಾಜದ ರಚನೆಗಾಗಿ ತಮ್ಮ ಕಂಠವನ್ನು ಮೀಸಲಿಡುವ ಛಲವಂತ ನಿಲುವಿನವರು. ಅದಕ್ಕೋ ಏನೋ ಭಕ್ತಿಯ, ಶೋಕಿಯ ಗೀತೆಗಳನ್ನು ಎಂದೂ ಹಾಡುವುದಿಲ್ಲ. ಜನರು ಇಷ್ಟಪಡುವ ಹಾಡುಗಳನ್ನು ಹಾಡಿ ಸೈ ಅನ್ನಿಸಿಕೊಳ್ಳುವ ಅಗ್ಗದ ಜನಪ್ರಿಯತೆಗಾಗಿ ಶಿವಶಂಕರ್ ಬಾಯಿ ಬಿಟ್ಟವರಲ್ಲ. ತಾವು ನಂಬಿದ ತತ್ವಗಳನ್ನು ವಧಿಸಲು ಬಯಸದೆ ಜನತೆಗೆ ನಿಜವಾಗಿ ಬೇಕಾಗಿರುವ ಹಾಡುಗಳನ್ನು ಹಾಡಿ ಜನಪದ ಅಭಿರುಚಿಗಳನ್ನು ಹುಟ್ಟಿಸುವ ತಾಕತ್ತುಳ್ಳ ಜನತೆಯ ಗಾಯಕರಾಗಿದ್ದಾರೆ. ಆರ್.ಜಿ. ಕಾಲೋನಿಯ ಬೀದಿಗಳು, ಕಕ್ಕಸ್ಸು ಗಲ್ಲಿಗಳು ಇಲ್ಲೆಲ್ಲ ಒಂದು ಚಡ್ಡಿ, ಅಂಗಿಯಲ್ಲಿ ಚಪ್ಪಲಿಯಿಲ್ಲದೆ ಓಡಾಡುವ ಈ ಗಾಯಕ ಹಾಡಿದಾಗ ಮಾತ್ರ ಇವರ ಅಂತಸ್ಸತ್ವ ಕೇಳುವವರನ್ನು ಮೋಡಿಗೊಳಗು ಮಾಡುತ್ತದೆ.





ಬಹುಮುಖ ಪ್ರತಿಭೆಯ-ವೆಂಕಟಪ್ಪ

ಮೈಸೂರಿನ ರೈಲ್ವೆ ವರ್ಕ್‌ಷಾಪಿನ ಬೆವರು ಬರಿಸುವ ಕೆಲಸದ ಮಧ್ಯೆಯೂ ಸದಾ ಕಲೆಗಾಗಿ ಮಿಡಿಯುತ್ತಿರುವ ವೆಂಕಟಪ್ಪ ಬಿಡುವಿನ ವೇಳೆಯಲ್ಲಿ ನಾಟಕ ನಿರ್ದೇಶಿಸುವುದು, ಹಿನ್ನೆಲೆ ಸಂಗೀತ ಒದಗಿಸುವುದು, ಹಾಡುವುದನ್ನು ಮೈಗೂಡಿಸಿಕೊಂಡವರು. ಜೊತೆಗೆ ನಾಟಕದ ಅತಿಯಾದ ಹುಚ್ಚಿನ ಫಲವಾಗಿ ಸ್ವತಃ 'ಬಂಧುರತ್ನ' ನಾಟಕ ರಚನೆ. ಟೌನ್‌ಹಾಲಿನಲ್ಲಿ ಪ್ರದರ್ಶಿಸಿ ಯಶಸ್ವಿ ಕೂಡ ಆದರು. ಹಳ್ಳೀಜಾಡಿನಲ್ಲಿ ನಾಟಕ ಆಡುವವರ ಜೊತೆ ನಿಕಟ ಸಂಪರ್ಕ ಇಟ್ಟುಕೊಂಡು ಸುಮಾರು ಹದಿನೈದು ವರ್ಷದಿಂದ ಚಟುವಟಿಕೆಗಳನ್ನು ನಡೆಸುತ್ತಿರುವ ಇವರು 'ಪ್ರತಿಭೆಗೆ ತಕ್ಕ ಪುರಸ್ಕಾರ ದೊರೆಯುವುದಿಲ್ಲ. ಜಾತಿ ಒಂದು ದೊಡ್ಡ ಮಾರಕವಾಗಿ ನನ್ನ ಪ್ರತಿಭೆ ಬೆಳೆಯಲು ತಕ್ಕ ಪರಿಸರವನ್ನು ನಿರ್ಮಿಸುತ್ತಿಲ್ಲ' ಅನ್ನುವರು.

ಅಸ್ಪೃಶ್ಯತೆ: ನನ್ನ ಅನುಭವ

ನಾ ಜಾಣನಾದರೂ

ನಾನು ಪ್ರೌಢಶಾಲೆಯಲ್ಲಿ ಓದುತ್ತಿರುವಾಗ ಎಲ್ಲರಿಗಿಂತ ಜಾಣನಿದ್ದೆ. ಉಪಾದ್ಯಾಯರು ಪಾಠ ಮಾಡುವಾಗ ಹುಡುಗರನ್ನು ಪ್ರಶ್ನೆ ಕೇಳುವುದು ಸಹಜ. ಇಂಥ ಪ್ರಶ್ನೆಗಳಿಗೆ ಸಾಮಾನ್ಯವಾಗಿ ಉತ್ತರಕೊಡುತ್ತಿದ್ದವನೆಂದರೆ ನಾನೆ. ಆದರೆ ಉಪಾದ್ಯಾಯರಿಂದ ಪ್ರತಿಕ್ರಿಯೆಯೇ ಇರುತ್ತಿರಲಿಲ್ಲ. ಒಂದು ದಿನ ಮೇಲು ಜಾತಿಯ ಹುಡುಗ ಪ್ರಶ್ನೆಗೆ ಉತ್ತರ ಹೇಳಿದ. ಆ ಒಂದು ಉತ್ತರದ ತೃಪ್ತಿಗಾಗಿ ಉಪಾಧ್ಯಾಯರು. ಹುಡುಗನನ್ನು ತುಂಬಾ ಹೊಗಳಿದರು. ಓದುವುದಕ್ಕೆ ಪ್ರೋತ್ಸಾಹಕೊಟ್ಟು ತರಗತಿಗೆ ಜಾಣ ಹುಡುಗನಂತೆ ಬೆನ್ನುತಟ್ಟಿ ಅವನ ಏಳ್ಗೆಯನ್ನು ಬಯಸಿದರು. ಇದೆಂಥ ವ್ಯವಸ್ಥೆ ಎನ್ನುವುದು ಅರ್ಥವಾಗಲಿಲ್ಲ.

● **ನಂಜನಹಳ್ಳಿ ನಾರಾಯಣ**

ಬ್ರಾಹ್ಮಣ ಪಾಲಿಸಿ

ನಾನೊಬ್ಬ ಜೀವವಿಮಾ ಪ್ರತಿನಿಧಿ. ನಮ್ಮ ಮನೆಯ ಹತ್ತಿರದ ಲಕ್ಕ ಎಂಬುವನು ಶಂಕರನಾರಾಯಣಶಾಸ್ತ್ರಿ ಎಂಬ ಬ್ರಾಹ್ಮಣನಿಂದ 2500 ರೂಗಳ ಒಂದು ಜೀವವಿಮಾ ಪಾಲಿಸಿಯನ್ನು ಕೊಂಡಿದ್ದ. ಆದರೆ ಆತ ಇದಾದ ಕೆಲವಾರು ದಿನಗಳಲ್ಲಿಯೇ ಸಾವನ್ನಪ್ಪಿದ. ಅವನ ಸಂಸಾರದ ಸ್ಥಿತಿ ಚಿಂತಾಜನಕವಾಯಿತು. ಈ ಸಮಯಕ್ಕೆ ಅವನ ಮನೆಯವರಿಗೆ ಜೀವವಿಮಾ ಪಾಲಿಸಿಯ ಬಾಂಡಿನ ಜ್ಞಾಪಕ ಬಂದು ಅದನ್ನು ನನ್ನ ಹತ್ತಿರಕ್ಕೆ ತಲುಪಿಸಿದರು. ಅದಕ್ಕೆ ಬೇಕಾದ ಎಲ್ಲಾ ವಿವರಗಳನ್ನು ನಾನೇ ನಿಂತು ಒದಗಿಸಿ ಒಂದು ಸಾಕ್ಷಿ ಬೇಕಾಗಿದ್ದರಿಂದ ಪಾಲಿಸಿಯನ್ನು ಮಾರಿದ್ದ ಬ್ರಾಹ್ಮಣನ ಹತ್ತಿರಕ್ಕೆ ಹೋಗಿ ಕೇಳಿದೆ. ನನ್ನ ಜಾತಿ ಅವನಿಗೆ ಗೊತ್ತಿದ್ದರಿಂದಲೊ ಅಥವಾ ಯಾವ ಕುತಂತ್ರಕ್ಕೊ ಆತ ಎಲ್ಲಾ ದಾಖಲೆಪತ್ರಗಳನ್ನು ಕೆಳಗಿಟ್ಟು ದೂರ ನಿಂತುಕೊ ಅಂದ. ಶ್ರೀ ಲಕ್ಕಯ್ಯನವರು ಬದುಕಿದ್ದಾಗ "ಲಕ್ಕಯ್ಯನವರೇ ಇಲ್ಲಿ ಸಹಿ ಹಾಕಿ ಅಲ್ಲ ಸಹಿ ಹಾಕಿ" ಎಂದು ಪಾಲಿಸಿ ಪಾಯಿದೆಗಾಗಿ ರುಜು ಮಾಡಿಸಿಕೊಂಡಿದ್ದಾತನೇ ಇಂದು ಈ ರೀತಿ ವರ್ತಿಸಿದ್ದು ವಿಚಿತ್ರವಾಗಿತ್ತು,

ಪದ್ಮರಾಜು, ಮೈಸೂರು

ಮುಂಗಾರು ಪ್ರಕಾಶನ

ಬೆಂಗಳೂರು ದಕ್ಷಿಣ ೫೬೨೧೧೮

ಹೊಲೆಮಾದಿಗರ ಹಾಡು (೨ ನೆಯ ಮು) ಸಿದ್ಧಲಿಂಗಯ್ಯ ರೂ. ೩

- ಅಲ್ಲೆ ಕುಂತವರೆ ಸಿದ್ಧಲಿಂಗಯ್ಯ ರೂ. ೨
- ಗಾಂಧಿಸ್ಮರಣೆ ಚಂದ್ರಶೇಖರ ಪಾಟೀಲ ರೂ. ೬
- ಬೆಳ್ದಿಂಗ್ಳಪ್ಪನ ಪೂಜೆ ಅಗ್ರಹಾರ ಕೃಷ್ಣಮೂರ್ತಿ ರೂ. ೪
- ಆನೆ ಎಚ್. ಎಂ. ಚೆನ್ನಯ್ಯ ರೂ. ೩
- ಬುರಡಿಬಾಬಾನ ಲಕ್ವಾಪಹರಣ ಪವಾಡ ಚಂಪಾ. ರೂ. ೧

ಒಟ್ಟಿಗೆ ೧೩ ರೂ. ಗಳನ್ನು ಕಳಿಸುವಸರಿಗೆ
ಮೇಲಿನ ಆರೂ ಪುಸ್ತಕಗಳನ್ನು
ನಮ್ಮ
ಅಂಚೆ ವೆಚ್ಚದಲ್ಲಿ ಕಳಿಸಲಾಗುವುದು —

ಕಾಳೇಗೌಡ ನಾಗವಾರ, 20, ಕೆಂಗೇರಿ ಉಪನಗರ ಬೆಂಗಳೂರು ದಕ್ಷಿಣ೫೬೨೧೧೮

ಅಮೃತ್ ಬೇಕರಿ

ಅಮೃತ್ ಫ್ರುಟ್ಸ್

●

ಅಮೃತ್ ಸ್ವೀಟ್ಸ್

●

ಅಮೃತ್ ಕಾಫೀ

ಅಶೋಕ ಸರ್ಕಲ್, ಕೆ. ಆರ್. ಪುರಂ
ಮೈಸೂರು – 4

ಉಉಉಉಉಉಉಉಉಉಉಉಉಉಉಉ

ಮದುವೆಗೆ ಬೇಕಾಗುವ
ಶುದ್ಧ ರೇಷ್ಮೆ ಸೀರೆಗಳೂ
ಟೆರಿವುಲ್ ಸೂಟ್ ಬಟ್ಟೆಗಳೂ
ಈಗ ತಾನೇ ಬಂದಿವೆ.
ಬೇಟಿಕೊಡಿ —
ಮಿಲ್ಲಿನ ಮುದ್ರಿತ ಬೆಲೆಗೆ ಎಲ್ಲಾ ಬಟ್ಟೆಗಳೂ ದೊರೆಯುತ್ತವೆ.

ಭಾ ವ ಸಾ ರ್ ಆ ದ ರ್ಶ

ಗಾಂಧಿಚೌಕ್, **ಮೈ ೂ ು**
ಶುಭಾಶಯಗಳೊಡನೆ

oooooooooooooooooo oooooooooooooooooooooo

ಪಂಚಮಕ್ಕೆ ಕ್ರಾಂತಿಕಾರಿ ಶುಭಾಶಯಗಳು

ಎಂ. ರಂಗಸ್ವಾಮಿ, ದ್ವಿತೀಯ ಬಿ.ಎ.
ಅಧ್ಯಕ್ಷರು, ಯುವಕ ಸಂಘ
ಸಿದ್ಧನಹುಂಡಿ

★ **ಜನಪ್ರಿಯ ದಿನಪತ್ರಿಕೆ**

ವಿಶಾಲ ಕರ್ನಾಟಕ

ಬೆಂಗಳೂರಿನಿಂದ ಪ್ರಕಟಿತ
ಇಂದೇ ಚಂದಾದಾರರಾಗಿರಿ ತಿಂಗಳಿಗೆ 9 ರೂಪಾಯಿ ಮಾತ್ರ
ಮೈಸೂರಿನ ವ್ಯವಹಾರಕ್ಕೆ :

ಜಿ. ಸಿ. ಬಸವರಾಜ್
ಬಿ. ಎಲ್. ಶ್ರೀಧರ್
ನಂ. 1. ವಿಶ್ವೇಶ್ವರಯ್ಯ ಬಿಲ್ಡಿಂಗ್ಸ್
ಕೆ. ಆರ್. ಸರ್ಕಲ್, ಮೈಸೂರು

ssssssssssssssssssssssssssssssssssssssssssssssss

ಪಂಚಮಕ್ಕೆ

ಶುಭಾಶಯಗಳು

ರಾಘವೇಂದ್ರ ಬ್ಲಾಕ್ ಮೇಕರ್ಸ್
ದಾಸಪ್ರಕಾಶ ಹೋಟೆಲ್ ಹಿಂಭಾಗ
4ನೇ ಕ್ರಾಸ್, ಅಶೋಕ ರೋಡ್ ಲಷ್ಕರ್ ಮೊಹಲ್ಲ ಮೈಸೂರು

ದಲಿತರ ಉಸಿರು

ಪಂಚಮ ಮಾಸಪತ್ರಿಕೆಗೆ

ಶು ಭಾ ಶ ಯ ಗ ಳು

— ಶ್ರೀ ದೊಡ್ಡಯ್ಯ
ಫೇರ್ ಪ್ರೈಜ್ ಡಿಪೊ
ಎರಡನೇ ಕ್ರಾಸ್, ಅಶೋಕಪುರಂ
ಮೈಸೂರು - ೪

With best compliments from :

H. D. Amaranathan B.Sc.
BANGALORE

ಪಂಚಮಕ್ಕೆ ಹಾರ್ದಿಕ ಶುಭಾಶಯಗಳು

—ಶ್ರೀನಿವಾಸ ಅಂತಿಮ ಎಂ. ಎ.
ಮಾನಸಗಂಗೋತ್ರಿ, ಮೈಸೂರು.

With best compliments from :

B. M. Shivanna Gowda II M.A.
Department Of Journalism
Manasagangothri MYSORE

(12ನೇ ಪುಟದಿಂದ)

...ಂಥದನ್ನು ತನ್ನ ಸಾಹಿತ್ಯಕ್ಕೆ ತಳಹದಿಹಾಕಿಕೊಂಡು ಹೊರಡುವವ ನಿಜವಾಗಿಯೂ ದಲಿತ ಸಾಹಿತಿಯಾಗುವುದಿಲ್ಲ ಎಂಬುದು ಇವರ ವಾದ.

ಆದರೆ ಈ ರೀತಿಯ ಆಮೂಲಾಗ್ರವಾದ ಪ್ರತಿಭಟನೆಯ ಜೊತೆ ಕೆಲವರು ಹೊಂದುವುದಿಲ್ಲ. ಅವರ ಪ್ರಕಾರ ಹಿಂದೂಧರ್ಮದ ಕೊಳಕು ಅಂಶಗಳು ಸೃಷ್ಟಿಯಾಗಿರುವ ಕಾಲವನ್ನು ಅರಿತುಕೊಂಡು, ಅವುಗಳ ಪುನರ್ ಪರಿಶೀಲನೆಗೆ ತೊಡಗಬೇಕು–ಈ ವಾದದಲ್ಲೂ ಸತ್ಯವಿಲ್ಲವೆಂದು ದೂರಲಾಗದು. ನಿಜವಾದ ದಲಿತ ಸಾಹಿತ್ಯವು ಬೌದ್ಧ ಮತಕ್ಕೆ ವರ್ಗಾದಂದಿನಿಂದ ಪ್ರಾರಂಭವಾಯಿತೆಂದರೂ–ಇದಕ್ಕಿಂತ ಹಿಂದಿದ್ದ ಒಂದು ರೀತಿಯ ಚಲನಶೀಲ ಸಾಹಿತ್ಯವನ್ನು ನಾವು ಮರೆಯುವಂತಿಲ್ಲ. ಈ ಕಾಲದಲ್ಲೇ ಬಂದ ಚರ್ಚಾಸ್ಪದವಾದ ಆತ್ಮಕಥನ ರೀತಿಯ ಹಾಡುಗಬ್ಬಗಳ ರೀತಿಯ...ಸಾಹಿತ್ಯ ಮುಂದಿನ ಬೆಳವಣಿಗೆಗೆ ಹಿನ್ನೆಯಾಗಿವೆ. ಈ ಜನಪದ ಸಾಹಿತ್ಯ ಇನ್ನೂ ಮುಂದುವರಿಯುತ್ತಿದ್ದು; ವಾಮನ್ ಕರಡಕ್‌ರ ಮುಖೇನ ಪುನಶ್ಚೇತಗೊಂಡಿವೆ. ಬೌದ್ಧ ಧರ್ಮದ, ಬುದ್ಧನ, ಅಂಬೇಡ್ಕರ್.... ಬಗೆಗೆ ಕರಡಕ್ ರಚಿಸಿರುವ ಹಾಡುಗಳು ಬೌದ್ಧ ಸಾಹಿತ್ಯದ ಮೈಲುಗಲ್ಲಾಗಿವೆ. ಆದರೆ ದಲಿತ ಸಾಹಿತ್ಯ ಅಂಬೇಡ್ಕರ್‌ರನ್ನಾಗಲೀ, ಬುದ್ಧನನ್ನಾಗಲೀ ಹೊಗಳುವುದಿಲ್ಲ. ಇದರ ಮೂಲ ಗುರಿ ದಲಿತರ ನೋವುಗಳನ್ನು ಅನುಭವಗಳ ಮೂಲಕ ಶೋಧಿಸುವುದು–ಅವುಗಳನ್ನು ಭಾಷೆಯ ಮೂಲಕ ಹಿಂದೆಂದೂ ಹಿಡಿಯಲಾಗದ ರೀತಿಯಲ್ಲಿ ಹಿಡಿದಿಡುವುದಾಗಿದೆ. ಮಹರ್ ಎಂಬ ಪದವನ್ನು ಅಪರೂಪವಾಗಿ ಹೇಳುವ ಈ ಸಾಹಿತ್ಯ; ೧೯೨೭ರಲ್ಲಿ ಮನುಸ್ಮೃತಿಯನ್ನು ಸುಡುವುದರಿಂದ ಒಂದು ಐತಿಹಾಸಿಕ ದಾಖಲೆಯನ್ನು ಸ್ಥಾಪಿಸಿ, ತನ್ನ ಮೂಲಗುರಿಯನ್ನು ಸಾಧಿಸಹೊರಟಿತು.

ಈಚಿಗಿನ ದಲಿತ ಸಾಹಿತ್ಯದಲ್ಲಿ ಮುಖ್ಯವಾಗಿ ನಿಲ್ಲುವ ಬರಹಗಾರ ಶಂಕರ ರಾವ್ ಖರತ್. 'ಬಾರಾ ಬಲ್ಯೂತೆದಾರ್' ಎಂಬ ಕತಾಸಂಕಲನ ೧೯೫೮ರಲ್ಲಿ ಪ್ರಕಟವಾಯಿತು. ಇದರಲ್ಲಿ ಮಹರ್ ಜನಾಂಗವನ್ನೊಳಗೊಂಡ ಸಂಪ್ರದಾಯಿಕ ಹಳ್ಳಿಪಾತ್ರಗಳ ಚಿತ್ರಣವಿದೆ. 'ಅಂಬೇಡ್ಕರ್ ಪತ್ರಗಳು', 'ಬೌದ್ಧ ಮತದ ಐತಿಹಾಸಿಕ ದಾಖಲೆ'ಗಳನ್ನೂ ಒಳಗೊಂಡಂತೆ ೨೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಖರತ್ ಇನ್ನೂ ಬರೆಯುತ್ತಿರುವರು. ಇವರ ಉದ್ದೇಶ ನಿಜವಾಗಿಯೂ ಮಹರ್ ಮತ್ತು ಅವರಿಗಿಂತ ಕೀಳಾದ ಜನರ ಜೀವನ ಸೃಷ್ಟಿಸುವುದಾಗಿದೆ. ಇವರ ಬರವಣಿಗೆಯಲ್ಲಿ ದುಃಖವಿದೆ ಆದರೆ ಪ್ರತಿಭಟಿಸುವಂಥ ಕಾವಿಲ್ಲ. ವಿವರಣೆಯಿದೆ ಆದರೆ ಸೂಕ್ಷ್ಮವಾದ ವಿಶ್ಲೇಷಣೆಯಿಲ್ಲ. ಇವರ ನಂತರದ ಮತ್ತೊಬ್ಬ ಪ್ರಮುಖ ಬರಹಗಾರ ಬಾಬುರಾವ್‌ಬಾಗುಲ್, ನಗರ ಜೀವನವನ್ನೇ ಆಧರಿಸಿ ರಚಿತವಾಗಿರುವ ಇವರ ಕತೆಗಳು ಹೆಚ್ಚು ವಾಸ್ತವವಾಗಿವೆಯಲ್ಲದೆ; ಶೋಷಣೆಯ ಕ್ರೂರವಾದ ಹಿಂಸಾತ್ಮಕ ವಾತಾವರಣ ಕಲ್ಪಿಸುವುದರ ಮೂಲಕ ಪ್ರತಿಭಟನೆಯ ಜೋರು ಇವರ ಎಲ್ಲಾ ಕತೆಗಳಲ್ಲೂ ಕಾಣುವುದು. ಮೂರನೇ ಮುಖ್ಯ ಕತೆಗಾರ ಅಣ್ಣಾಭಾವೆ ಸಾಥೆ ದಲಿತ ಜನಾಂಗದ ಮತ್ತೊಂದು ಮುಖವನ್ನು ಚಿತ್ರಿಸುವರು. ಇವರ ಕತೆ ಮತ್ತು ಕಾದಂಬರಿಗಳ ನಾಯಕ ಮಾದಿಗರ ಜನಾಂಗದವನಾಗಿದ್ದು; ಬ್ರಿಟಿಷ್ ವಿರುದ್ಧ ಹೋರಾಡಿದ ಕದನಗಳ ನಾಯಕನಾಗಿರುವನು. ಇವರು ತಮ್ಮದೊಂದು ಪ್ರಮುಖವಾದ ಪುಸ್ತಕವನ್ನು ಅಂಬೇಡ್ಕರ್ ಅವರಿಗೆ ಅರ್ಪಿಸಿದ್ದರೂ; ಅಂಬೇಡ್ಕರ್ ಪಕ್ಷದ ಜೊತೆಗೆ ಹೊಂದಿಕೊಳ್ಳದೆ ಕಮ್ಯುನಿಷ್ಟ ಪಕ್ಷದ ಕಡೆಗೇ ಹೆಚ್ಚುಗಮನ ಕೊಡುವರು. ಬಾಂಬೆಯ ಕೊಳಕುವಾತಾವರಣದಲ್ಲಿರುವ ಸರ್ವ ಅನುಭವದ ಮೂಲಕ ದಲಿತರಿಗೆ ತೀರಾ ಹತ್ತಿರದವರಾಗಿ ಬಿಡುವರು. ಹಾಗೇ ಆರ್ಥಿಕ ಅಸಮಾನತೆಯ ವಿರುದ್ಧ ತಮ್ಮ ಬರಹಗಳಿಂದ ಪ್ರತಿಭಟಿಸುವರು.

ದಲಿತ ಸಾಹಿತ್ಯವು ಇಂದು ಗುಣ, ಮೌಲ್ಯ, ಪ್ರಮಾಣದಿಂದಾಗಿ ಸರಿಯಾದ ರೀತಿಯಲ್ಲಿ ಸ್ಥಾಪಿತವಾಗಿದೆ. ಇತ್ತೀಚಿನ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ವೈ. ಬಿ. ಚವ್ಹಾಣ್ ಹೀಗೇಳಿದ್ದಾರೆ:

"....ಮರಾಠಿ ಸಾಹಿತ್ಯಕ್ಕೆ ದಲಿತ ಸಾಹಿತಿಗಳ ಕೊಡುಗೆ ಅಪಾರವಾದುದು. ವೈಯಕ್ತಿಕವಾದ ಅನುಭವಗಳನ್ನು ಅವರದೇ ಆದ ಭಾಷೆಯ ಮೂಲಕ ಹಿಡಿದಿಡುವುದರಲ್ಲಿ ಇವರು ಹೊಸತನವನ್ನು ಸಾಧಿಸಿರುವರು". ['ಟೈಮ್ಸ್ ವೀಕ್ಲಿ' ಯ ವಿಶೇಷ ಸಂಚಿಕೆಯ ಮುನ್ನುಡಿಯಿಂದ–ನವೆಂಬರ್ ೨೫, ೧೯೭೩]

ದಿಲೀಪ್ ಪಡ್‌ಗಾಂವ್‌ಕರ್ ದಲಿತ ಸಾಹಿತ್ಯವನ್ನು ಕುರಿತು ಹೀಗೆ ಹೇಳಿದ್ದಾರೆ:

"ದಲಿತ ಸಾಹಿತ್ಯದ ಮಿತಿಯನ್ನೂ ಗುರುತಿಸಿಕೊಂಡು ಹೇಳುವುದಾದರೆ; ಈ ದೇಶದಲ್ಲಿ ಬರಡುಗಟ್ಟಿ ಹೋಗಿದ್ದ ಸಾಹಿತ್ಯ ಕ್ಷೇತ್ರವನ್ನು ಪುನಶ್ಚೇತನಗೊಳಿಸಿದವರು ದಲಿತ ಸಾಹಿತಿಗಳು. ಇದರ ಪ್ರಮುಖ ಗುಣವೆಂದರೆ– ಯಾವ ಮಧ್ಯಮ ವರ್ಗದ ಹಿಂದೂಗಳು ಈ ದೇಶದ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಮನಾಪಲಿ ಮಾಡಿಕೊಂಡಿದ್ದಾರೋ ಅವರ ವಿರುದ್ಧ ಜೀವನ ಕ್ರಮದಲ್ಲಿ ಮತ್ತೂ ಬರಹಗಳಿಂದ ಸಕ್ರಿಯಾತ್ಮಕ–ವಾಗಿ ಬಂಡೇಳುವುದು"

ಹೊಸ ಭಾಷೆಯಿಂದ ಹೊಸಭಾವನೆ ಮತ್ತು ಜನರ ಜೀವನಕ್ರಮ ವರ್ಣಿಸುವುದರಲ್ಲಿ ಈ ದಲಿತ ಸಾಹಿತ್ಯ ನಿಜವಾಗಿಯೂ– ಎಲ್ಲಾ ತರಹದಲ್ಲೂ ಕ್ರಾಂತಿದಾಯಕವಾದುದು ಎಂಬ ಸಂಗತಿ ಒಪ್ಪಿಗೆಯಾಗಿದೆ. ಆದರೂ ಇದರ ಬಗ್ಗೆ ಕೆಲವು ವಿವಾದಾತ್ಮಕ ವಿಚಾರಗಳಿವೆ. ವಿಮರ್ಶೆ ಮುಖ್ಯವಾಗಿ ಈ ಮೂರು ಅಂಶಗಳಲ್ಲಿ ಸುತ್ತುವುದನ್ನು ಕಾಣಬಹುದು.

(i) ದಲಿತ ಸಾಹಿತ್ಯವೊಂದೇ ವಸ್ತುನಿಷ್ಠ ಧೋರಣೆಯನ್ನು ಉಳ್ಳದ್ದಾಗಿರುವುದೇ ?

(ii) ದಲಿತ ಸಾಹಿತ್ಯವನ್ನು ದಲಿತರು ಮಾತ್ರ ಬರೆಯಲು ಯೋಗ್ಯರೆ? ಅಥವಾ ಕೇಶವ ವಸ್ತು ಅವರು ಮಹರ್ ಹುಡುಗನ ಬಗ್ಗೆ ಬರೆದ ಪದ್ಯ, ಎಸ್. ಎಮ್. ಮೋಟೆಯವರು ಮಹರ್ ಜೀವನ ಕುರಿತು ಬರೆದ ಕತೆಗಳು, ಇತ್ತೀಚಿನ ಜಯಂತ ದಾಲವಿಯವ 'ಚಕ್ರ' ಜಾತಿಯ ದಲಿತರನ್ನು ಕುರಿತಾದ ಬರಹಗಳು– ದಲಿತ ಸಾಹಿತ್ಯದೊಳಗೆ ಬರಲು ಸಾಧ್ಯವಿಲ್ಲವೇ ?

(iii) ಇವತ್ತಿನ ವಿದ್ಯಾವಂತ ದಲಿತ ಜನಾಂಗವನ್ನು ಹಿಂದಿನ ದಲಿತ ಜನಾಂಗದವರೊಡನೆ ಹೋಲಿಸಿದರೆ; ಇಂಡಿಯಾದ ಇತರ ಮಧ್ಯಮ ವರ್ಗದವರಾಗುವರು. ಆದರೆ ಅಂಥವರನ್ನು ದಲಿತರೆಂದು ಕರೆಯಲು ಸಾಧ್ಯವೇ ?

ಇವುಗಳಿಗೆ ಉತ್ತರ ರೂಪವಾಗಿ ಹೇಳುವಾಗ; ದಲಿತರಿಂದಲೇ ಮಾತ್ರ ದಲಿತ ಸಾಹಿತ್ಯ ವಾಗುವುದು ಎಂದೇ ಹೇಳಬೇಕು. ಯಾಕೆಂದರೆ; ಮಿಕ್ಕ ಯಾವ ಜಾತಿಯವರಿಗಿಂತಲೂ ಈ ದೇಶದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತುಳಿಯಲಾಗಿರುವ ದಲಿತ ಮಾತ್ರ ಇಂಥ ಅನುಭವಗಳನ್ನು ಪಡೆಯುದಕ್ಕೆ ಸಾಧ್ಯ. ಈ ದೇಶದ ದಲಿತ ವಿದ್ಯಾವಂತರೂ ಬಹಳ ಕಾಲದಿಂದ ಬಡತನವನ್ನು ಅನುಭವಿಸುವವರೇ ಆಗಿರುವರಲ್ಲದೆ; ಇಂಡಿಯಾದವರ ಬುದ್ಧಿಗಳೊಳಗೆ ಇನ್ನೂ ತುಂಬಿಕೊಂಡಿರುವ ಹೊಲೆ ಭಾವನೆಗಳಿಗೆ ತುತ್ತಾಗಿರುವವರೂ; ಅದರಡಿಯಲ್ಲಿ ಸಿಕ್ಕೂ ನೋವುಂಡವರೂ ಆಗಿರುವರು, ತಮ್ಮ ಅನುಭವಗಳಿಂದ ಈಗ ಹಳ್ಳಿಗಳಲ್ಲಿ ತಮ್ಮ ರಕ್ತ ಸಂಬಂಧಿಗಳು ಅನುಭವಿಸುವ ನೋವನ್ನು ಕಾಣಬಲ್ಲ–ಅದನ್ನು ಅಭಿವ್ಯಕ್ತಿ ಮಾಡಬಲ್ಲ ತಾಕತ್ತು ಇವರಿಗೆ ಮಾತ್ರ ಇರುವುದು. ಹೀಗೆ ನೋವನ್ನು ಬಿಚ್ಚಿ ತೋರಿಸಿ ಪ್ರತಿಭಟಿಸುವುದರಿಂದ ತಮಗೆ ಬರಬೇಕಾದ ಹಕ್ಕನ್ನು ಕೇಳಲು ಇವರಿಗೆ ಮಾತ್ರ ಸಾಧ್ಯವಾಗಿರುವುದು.

[ಸೌಜನ್ಯ : ವಾಗಾರ್ಥ ; ಕೃತಜ್ಞತೆಗಳು : ಶ್ರೀ ಎಂ. ಅಕಬರಅಲಿ]

Regd. No. 29681/76 ಪಂಚಮ ವಿಶೇಷ ಸಂಚಿಕೆ 20-12-76 R. No. KRNN–47/76

ಅಂಬೇಡ್ಕರ್ ಜೀವನದ ಮೈಲಿಗಲ್ಲುಗಳು

- O 14.4.1891 ರಲ್ಲಿ ಜನನ: ಮಹರಾಷ್ಟ್ರದ ಅಂಬೇವಾಡಿಯಲ್ಲಿ.
- O ಮುಂಬಯಿಯಲ್ಲಿ ಪ್ರಾಥಮಿಕ ಶಿಕ್ಷಣ.
- O ಅಮೇರಿಕದ ಕೊಲಂಬೊ ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಪದವಿ.
- O ಗ್ರೇಸ್‌ಇನ್‌ನಲ್ಲಿ ಕಾನೂನು ಪದವಿ.
- O 1917 ಬರೋಡೆ ಮಹರಾಜರ ಮಂತ್ರಿಮಂಡಲದಲ್ಲಿ ಅರ್ಥಸಚಿವರು.
- O ಸಿಡ್ನಿಹ್ಯಾಂ ಕಾಲೇಜ್ ಆಫ್ ಕಾಮರ್ಸ್ ಅಂಡ್ ಎಕನಾಮಿಕ್ಸ್‌ನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರು.
- O 1923 ಭಾರತದಲ್ಲಿ ವಕೀಲಿ ವೃತ್ತಿ.
- O 1924 ರಲ್ಲಿ "ಬಹಿಷ್ಕೃತ ಹಿತಕಾರಿಣಿ ಸಭಾ" ಎಂಬ ಸಾಂಸ್ಕೃತಿಕ ಮತ್ತು ವಿಧ್ಯಾಸಂಸ್ಥೆ ಸ್ಥಾಪನೆ.
- O 1924 ಹತ್ತು ಸಹಸ್ರ ಅಸ್ಪೃಶ್ಯ ಜನಾಂಗದೊಡನೆ ಬಾವಿಗಳಲ್ಲಿ ನೀರು ತೆಗೆಯುವಿಕೆ ಮುಂತಾದ ನ್ಯಾಯಬದ್ಧ ಹಕ್ಕುಗಳಿಗೆ ಹೋರಾಟ.
- O 1927–ಮಹದ್‌ನಲ್ಲಿ ಹತ್ತು ಸಹಸ್ರ ಅಸ್ಪೃಶ್ಯ ಜನಾಂಗದ ಸಂಘಟಿತ ಸಮ್ಮೇಳನ.
- O 1928– ಅಸ್ಪೃಶ್ಯರ ಪ್ರತಿನಿಧಿಯಾಗಿ 'ಸೈಮನ್ ಕಮೀಷನ್'ಗೆ ನೇಮಕ.
- O ಮುಂಬಯಿ ವಿಧಾನ ಪರಿಷತ್ ಸದಸ್ಯರಾಗಿ ನೇಮಕ.
- O 1929– ಹದಿನೈದು ಸಹಸ್ರ ಅಸ್ಪೃಶ್ಯರ ಸಂಘಟನೆ ಮೂಲಕ ನಾಸಿಕ್ ಮುಂತಾದಕಡೆ ಪ್ರಮುಖ ದೇವಸ್ಥಾನಗಳ ಪ್ರವೇಶ.
- O 1930– ಸೈಮನ್ ಕಮೀಷನ್ ವರದಿ ನಿರಾಕರಣೆ.
- O ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣಾ ಪದ್ಧತಿಗೆ ಆಗ್ರಹ.
- O 1930– ಲಂಡನ್ನಿನಲ್ಲಿ ನಡೆದ ಪ್ರಧಾನಮಂತ್ರಿಗಳ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದರು.
- O 1932 – ಅಸ್ಪೃಶ್ಯರಿಗೆ ಮತ್ತು ಅಲ್ಪ ಸಂಖ್ಯಾತರಿಗೆ ಪ್ರತ್ಯೇಕ ಚುನಾವಣಾ ಪದ್ಧತಿಗಾಗಿ ಎರಡು ಮತಧಾನ ಹಕ್ಕಿಗಾಗಿ ಪೂನಾ ಒಪ್ಪಂದದಲ್ಲಿ ಒತ್ತಾಯ.
- O 1934 - ಮುಂಬಯಿ ಸರ್ಕಾರಿ ಲಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇರಿ ಅಲ್ಲಿಯೆ ಪ್ರಿನ್ಸಿಪಾಲರಾಗಿ ನೇಮಕ.
- O ನ್ಯಾಯಶಾಸ್ತ್ರಕ್ಕಾಗಿ ಕೊಲಂಬೊ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಇನ್ ಲಾ ಪದವಿ ಕೊಟ್ಟು ಗೌರವಿಸಿತು.
- O ಮುಂಬಯಿ ಮತ್ತು ಔರಂಗಬಾದ್‌ನಲ್ಲಿ ಸಿದ್ಧಾರ್ಥ ಕಾಲೇಜುಗಳ ಸ್ಥಾಪನೆ.
- O 1935 – ಯೋಲಾ ಕಾನ್ಫೆರೆನ್ಸ್ ನಡೆಸಿ ತನ್ನ ಜನಾಂಗ ಹಿಂದೂ ಧರ್ಮ ತ್ಯಜಿಸಲು ನಿರ್ಧಾರ.
- O 1935 – ನಾನು ಹಿಂದುವಾಗಿ ಸಾಯುವುದಿಲ್ಲವೆಂದು ಪ್ರತಿಜ್ಞೆ.
- O 1935 – "ಮೂಕ ನಾಯಕ" ಪತ್ರಿಕೆ ಪ್ರಾರಂಭ.
- O 1936 – ಲೇಬರ್ ಪಕ್ಷ ಸ್ಥಾಪನೆ.
- O 1937 – ಪಕ್ಷವನ್ನು ಚುನಾವಣೆಯ ಕಣಕ್ಕಿಳಿಸಿದರು.
- O 1937 – ಪ್ರಾಂತೀಯ ಸದಸ್ಯರಾಗಿ ನೇಮಕ.
- O 1938 – ಕೈಗಾರಿಕೆಗಳ ಮೇಲಿನ ಕಾನೂನಿನ ಬಗ್ಗೆ ಕಾಂಗ್ರೆಸ್ ವಿರುದ್ಧ ಸಂಘಟಿತ ಚಳುವಳಿ.
- O 1942 – ಅಖಿಲ ಭಾರತ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಬುಡಕಟ್ಟು ಒಕ್ಕೂಟ ಸ್ಥಾಪನೆ.
- O 1947 – ಸಾರ್ವತ್ರಿಕ ಚುನಾವಣೆಯ ಮೂಲಕ ಬೆಂಗಾಲ್ ಕ್ಷೇತ್ರದಿಂದ ಸಂಸತ್ತಿಗೆ ಆಯ್ಕೆ.
- O ನೆಹರೂ ಮಂತ್ರಿ ಮಂಡಲದಲ್ಲಿ ನ್ಯಾಯಾಂಗ ಮತ್ತು ಕಾರ್ಮಿಕ ಮಂತ್ರಿಯಾಗಿ ನೇಮಕ.
- O 1948 – ರಾಜ್ಯಾಂಗ ರಚನಾ ಸಭೆ ಅಧ್ಯಕ್ಷರಾಗಿ ನೇಮಕ.
- O 1956 – ಲಕ್ಷಾಂತರ ಮಂದಿ ತನ್ನ ಜನಾಂಗದೊಡನೆ ಬೌದ್ಧ ಮತಾವಲಂಬನೆ.
- O 6-12-1956. ಸ್ವಗೃಹದಲ್ಲಿ ನಿಧನ.

● ಪ್ರಿಯ ಓದುಗರೆ,

ನಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದ 'ಜಾತಿ ವಿನಾಶ' ಲೇಖನ ಭಾಗವನ್ನು ಈ ಸಂಚಿಕೆಯಲ್ಲಿ ಅನಿವಾರ್ಯವಾಗಿ ಹಾಕಲಾಗಲಿಲ್ಲ. ಮುಂದಿನ ಸಂಚಿಕೆಯಿಂದ ಮತ್ತೆ ಪ್ರಾರಂಭವಾಗುವುದೆಂದು ಈ ಮೂಲಕ ತಿಳಿಸುತ್ತೇವೆ.

●

ಕಳೆದ ಸಂಚಿಕೆಯಲ್ಲಿ ಮುದ್ರಣ ದೋಷದಿಂದ ಪತ್ರಿಕೆಯ ರಿಜಿಸ್ಟ್ರೇಷನ್ ನಂಬರ್ ತಪ್ಪಾಗಿ ಅಚ್ಚಾದುದಕ್ಕೆ ವಿಷಾದಿಸುತ್ತೇವೆ. ಭಾರತ ಸರ್ಕಾರದ ಪತ್ರಿಕಾ ರಿಜಿಸ್ಟ್ರಾರ್ ಅವರು ನೀಡಿದ ರಿ.ನಂ. 29681/76 ಎಂದು ಈ ಮೂಲಕ ಸ್ಪಷ್ಟಪಡಿಸುತ್ತೇವೆ.

—ಸಂಪಾದಕ

ವಿಳಾಸ: 26,9/2 ಕೆ. ಜಿ. ಕೊಪ್ಪಲ್, ಮೈಸೂರು-9   ಮುದ್ರಣ: ಆಂದೋಲನ ಮುದ್ರಣ, ಮೈಸೂರು-9